೩೩೨

ಉಪನ್ಯಾಸ
ಗ್ರಂಥಮಾಲೆ

ನೇಕಾರಿಕೆ ಮತ್ತು ಸರಕಾರ

ಈರಣ್ಣ ಹಟ್ಟಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವ

ಮಾರ್ಚ, ೧೯೮೨

ಉಪನ್ಯಾಸ ಗ್ರಂಥಮಾಲೆ-

೩೩೨

ನೇಕಾರಿಕೆ ಮತ್ತು ಸರಕಾರ

ಈರಣ್ಣ ಹಟ್ಟಿ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಕಾಶಕರು :

ಸಿ. ಎಸ್. ಕಣವಿ

ನಿರ್ದೇಶಕರು,

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು

ಮಾರ್ಚ್, ೧೯೮

ಬೆಲೆ : ೫೦ ಪೈಸೆ

ಮುದ್ರಕರು :

ಎಂ. ಎಸ್. ಹಿರಿಯಣ್ಣಯ್ಯ,

ನಿರ್ದೇಶಕರು,

ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ

ಧಾರವಾಡ–೫೮೦ ೦೦೩

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸ ಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾ ಲಯದ ಜ್ಞಾನಭಂಡಾರದ ಅಲ್ಪಾಂಶವನ್ನಾದರೂ ಮಹಾ ಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪ ನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವ ದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆ ಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆ ಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೩೩೧ ಪುಸ್ತಕಗಳು ಪ್ರಕಟ ವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನ ಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿ ಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ ಡಿ. ಎಂ. ನಂಜುಂಡಪ್ಪ
ಧಾರವಾಡ-೫೮೦ ೦೦೩ ಕುಲಪತಿಗಳು

ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗವು ಕೆರೂರು ಗ್ರಾಮದಲ್ಲಿ ಏರ್ಪಡಿಸಿದ ಉಪನ್ಯಾಸ ಶಿಬಿರದಲ್ಲಿ "ನೇಕಾರಿಕೆ ಮತ್ತು ಸರಕಾರ" ಎಂಬ ವಿಷಯ ಕುರಿತು ಉಪನ್ಯಾಸ ನೀಡುವ ಸುಸಂದರ್ಭ ನನಗೆ ಒದಗಿತ್ತು. ಉಪನ್ಯಾಸದ ವಿವರಗಳು ಇಂದು ಕಿರುಹೊತ್ತಿಗೆಯ ರೂಪದಲ್ಲಿ ಪ್ರಕಟವಾಗುತ್ತಿರುವದು ಸಂತೋಷದ ವಿಷಯ.

ಭಾರತದ ಕುಟೀರ ಉದ್ದಿಮೆಗಳಲ್ಲಿ ನೇಕಾರಿಕೆಗೆ ಮಹತ್ವದ ಸ್ಥಾನವಿದೆ. ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ಅವುಗಳ ಅಭಿವೃದ್ಧಿಗೆ ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸಿದರೂ, ಸಮನ್ವಿತ ಜವಳಿ ಧೋರಣೆಯ ಕೊರತೆಯಿಂದಾಗಿ, ಅವುಗಳ ಪ್ರಗತಿ ಯೋಜಿಸಿದಂತೆ ನಡೆಯಲಿಲ್ಲ. ಇತ್ತೀಚೆಗೆ ಸರಕಾರವು ಶಿವರಾಮನ ಸಮಿತಿಯ ಶಿಫಾರಸುಗಳನ್ನು ಅಂಗೀಕರಿಸಿ, ಕಾರ್ಯಕ್ರಮಗಳನ್ನು ಹಮ್ಮಿಕೊಂಡರೂ, ಸಮಗ್ರ ಜವಳಿ ನೀತಿಗೆ ಒಂದು ಆತಂಕವಾಗಿದೆ. ಜವಳಿ ರಂಗದಲ್ಲಿರುವ ಗಿರಣಿ ವಲಯ, ಕೈಮಗ್ಗ ಮತ್ತು ಪಾವರಲೂಮ ವಲಯಗಳು ಸಮ ತೋಲನವಾಗಿ ಪ್ರಗತಿಯನ್ನು ಸಾಧಿಸಬೇಕಾದರೆ ಸಮನ್ವಿತ ಜವಳಿ ಧೋರಣೆ, ಸಾರ್ವಜನಿಕ ಸಹಕಾರ ಮತ್ತು ಅಧಿಕಾರಿಗಳ ಮಾನ ವೀಯತೆ ಈ ತ್ರಿವಿಧ ಸೂತ್ರಗಳ ಕಾರ್ಯಾನುಷ್ಠಾನ ಅತ್ಯಗತ್ಯ.

ಇಂಥ ರಚನಾತ್ಮಕ ವಿಷಯುಗಳಲ್ಲಿ ನನ್ನ ಕುತೂಹಲವನ್ನು ಹೆಚ್ಚಿಸುತ್ತಿರುವ, ನನ್ನ ಲೇಖನ ಕಾರ್ಯಗಳಿಗೆ ಮಾರ್ಗದರ್ಶನ ವನ್ನೀಯುತ್ತಿರುವ ಆತ್ಮೀಯ ಗುರುಗಳಾದ ಪ್ರಿ. ಎಸ್. ಜಿ. ಕರಭಂಟನಾಳ ಮತ್ತು ಪ್ರಿ. ಪಿ. ಜಿ. ಇಟನಾಳ ಅವರಿಗೆ ನನ್ನ ಕೃತಜ್ಞತೆಗಳು. ಜವಳಿ ರಂಗದ ಸಮಸ್ಯೆಗಳನ್ನು ವಿಶ್ಲೇಷಿಸಲು ಅವಕಾಶ ಮತ್ತು ಮಾರ್ಗದರ್ಶನ ನೀಡುತ್ತಿರುವ ನನ್ನ ಸಂಶೋಧನಾ ಮಾರ್ಗದರ್ಶಿಗಳಾದ ಮತ್ತು ಗುರುಗಳಾದ ಡಾ॥ ಎಚ್. ಬಸಣ್ಣಾ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸದಿರಲಾರೆ.

ಈ ಕಿರು ಹೊತ್ತಿಗೆಯ ಪ್ರಕಟಣೆಯಲ್ಲಿ ಆಸ್ಥೆವಹಿಸಿದ ವಿಶ್ವ ವಿದ್ಯಾಲಯುದ ಪ್ರಸಾರಾಂಗದ ನಿರ್ದೇಶಕರಾದ ಶ್ರೀ. ಸಿ. ಎಸ್. ಕಣವಿ. ಉಪನಿರ್ದೇಶಕರಾದ ಶ್ರೀ. ಎಸ್. ಬಿ. ನಾಯಕ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ. ಎಲ್. ಎಂ. ಗುಡ್ಡೀನ ಅವರಿಗೆ ನನ್ನ ಧನ್ಯವಾದಗಳು.

ವಾಣಿಜ್ಯ ಮಹಾವಿದ್ಯಾಲಯ
ಬನಹಟ್ಟಿ
ತಾ॥ ೫-೧-೧೯೮೨.

ಈರಣ್ಣ ಹಟ್ಟಿ

ಪರಿವಿಡಿ

೧. ನೇಕಾರಿಕೆಯ ಪ್ರಾಗಿತಿಹಾಸ

ಭಾರತದ ನೇಕಾರಿಕೆ ಉದ್ಯಮದ ಬೆಳವಣಿಗೆಯು ಭರತಖಂಡದ ಸಂಸ್ಕೃತಿಯಷ್ಟೇ ಪುರಾತನವಾದುದು. ಹತ್ತಿಯನ್ನು ಬಳಸಿಕೊಂಡು ಬಟ್ಟೆಯನ್ನು ಉತ್ಪಾದಿಸಿದವರಲ್ಲಿ ಭಾರತೀಯರೇ ಮೊದಲಿಗರೆಂಬುದರಲ್ಲಿ ಇತಿಹಾಸಕಾರರಲ್ಲಿ ಯಾವ ಭಿನ್ನಾಭಿಪ್ರಾಯಗಳು ಕಂಡುಬರುವದಿಲ್ಲ. ಕ್ರಿ.ಶ. ಪೂರ್ವ ೧ ನೆಯ ಶತಮಾನದಿಂದ ೧೮ ನೆಯ ಶತಮಾನದ ವರೆಗೆ ಭಾರತದ ಹತ್ತಿ ಬಟ್ಟೆಗಳ ಉತ್ಪಾದನೆಯು ಪ್ರಪಂಚದ ಆಶ್ಚರ್ಯಗಳಲ್ಲೊಂದಾಗಿತ್ತು.

ಭಾರತದ ಹತ್ತಿ ಬಟ್ಟೆಯ ಇತಿಹಾಸವು ಉಪಖಂಡದ ೫೦೦೦ ವರ್ಷಗಳ ರಾಜಕೀಯ ಅದ್ಭುತ ಬದಲಾವಣೆಗಳಂತೆ ರಮ್ಯವಾದುದು. ಭಾರತೀಯರ ಅಸ್ತಿತ್ವ ಮೂಲದಿಂದ ವಿವೇಚನೆ ಮಾಡಿದಾಗ ಅವರು ಎಂದೂ ಬತ್ತಲೆಯಾಗಿದ್ದುದು ಕಂಡು ಬರುವದಿಲ್ಲ. ಅವರು ನೇಯ್ದ ಬಟ್ಟೆಗಳಿಗೆ ಶತಮಾನಗಳುದ್ದಕ್ಕೂ ಬೇಡಿಕೆಯಿತ್ತು. ಪ್ರಾಚೀನ ಸಂಸ್ಕೃತಿಯ ಮೂಲಗಳಾದ ಹರಪ್ಪಾ ಮತ್ತು ಮೊಹೆಂಜೋದಾರೊ ನಾಗರಿಕತೆಗಳಲ್ಲಿ ದೊರಕಿದ ವರ್ಣಾಲಂಕಾರ ಕುಂಭ ಹತ್ತಿ ಬಟ್ಟೆಯಲ್ಲಿ ಮುಚ್ಚಲ್ಪಟ್ಟಿದ್ದು, ತದನಂತರ ಬಟ್ಟೆಯ ರಾಸಾಯನಿಕತೆಯನ್ನು ವಿಶ್ಲೇಷಣೆ ಮಾಡಿ ನೋಡಿದಲ್ಲಿ,

ವೈವಿಧ್ಯಮಯ ಬಟ್ಟೆಯ ಉತ್ಪಾದನೆಯು ಉತ್ತರ ಭಾರತದಲ್ಲಿ ಬೆಳೆದುಕೊಂಡು ಬಂದಿರುವದೆಂದು ಗೊತ್ತಾಗುವದು. ಸಿಂಧೂ ನದಿಯ ಸಂಸ್ಕೃತಿಯನ್ನು ಇತಿಹಾಸಕಾರರು ಪತ್ತೆ ಹಚ್ಚುವಾಗ ಅವರಿಗೆ ದೊರಕರುವ ಕದಿರುಬಿಲ್ಲೆ ಮತ್ತು ಚರಕಾಗಳ ಆಧಾರದ ಮೇಲಿಂದ ಪ್ರಾಚೀನ ಭಾರತೀಯರಿಗೆ ನೇಕಾರಿಕೆಯ ಪರಿಚಯ ಸಾಕಷ್ಟಿತ್ತೆಂಬುದು ಸ್ಪಷ್ಟವಾಗುತ್ತದೆ.

ಇತಿಹಾಸಕಾರರಿಗೆ ದೊರೆತ ಕೆಲವು ಅವಶೇಷಗಳಿಂದ ಕಂಡು ಬರುವುದೇನೆಂದರೆ ಅತೀ ಪ್ರಾಚೀನ ಸಂಸ್ಕೃತಿಯಾದ ಮೆಸೊಪೊಟೆಮಿಯಾದ ಉತ್ಕೃಷ್ಟ ಉಣ್ಣೆ ಬಟ್ಟೆಗಳಿಗೆ ಸಿಂಧೂ ನದಿ ತೀರದ ನೇಕಾರರು ಉತ್ತಮ ಹತ್ತಿ ಬಟ್ಟೆಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ಕ್ರಿ. ಶ. ಪೂರ್ವ ೧೨೦೦ ರಲ್ಲಿ ಆರ್ಯರ ಯುದ್ಧದಿಂದಾಗಿ ಹತ್ತಿ ಬಟ್ಟೆಯ ಬಳಕೆ ತೀವ್ರಗೊಂಡು ಬೇಡಿಕೆ ಅಧಿಕಗೊಂಡಿತು. ಆರ್ಯರು ತಮ್ಮ ಧರ್ಮೋಪವಿಧಿಗಳಿಗೆ ಹತ್ತಿ ಬಟ್ಟೆಯನ್ನು ಉಪಯೋಗಿಸುತ್ತಿದ್ದರು.

ಪ್ರಾಚೀನ ಹಿಂದೂ ಧರ್ಮ ಶಾಸ್ತ್ರಗಳಲ್ಲಿ ಹತ್ತಿಬಟ್ಟೆಗಳ ವಿಷಯದ ಬಗ್ಗೆ ಸಾಕಷ್ಟು ಉಲ್ಲೇಖಗಳಿರುವುದು ಕಂಡುಬರುವದು. ಉದಾಹರಣೆಗಾಗಿ ಅನಾಗರಿಕತೆಯನ್ನು ತೊಡೆದು ಹಾಕಲು ನೇಕಾರರು ಹಗಲು-ರಾತ್ರಿ ಕೈಮಗ್ಗಗಳ ಮೇಲೆ ನಿರತವಾಗಿರುವ ವಿಷಯ ಹಾಗೂ ಉನ್ನತ ವರ್ಗದ ಹಿಂದೂಗಳಿಗೆ ಅಗತ್ಯವಿರುವ ಹತ್ತಿಯ ಎಳೆಗಳಿಂದ ಮಾಡಿದ ದಾರ (ಯಜ್ಞೋಪವಿತಮ್) ಮುಂತಾದವುಗಳ ಉಲ್ಲೇಖವನ್ನು "ವೇದ"ಗಳಲ್ಲಿ ಕಾಣುತ್ತೇವೆ.

"ಹತ್ತಿ" (cotton) ಎಂಬ ಪದಾವಳಿಯ ಕಲ್ಪನೆಯನ್ನು ಸಂಸ್ಕೃತದ 'ಕರ್ಪಾಸ್' (karpasa) ಮೂಲದಿಂದ ಬಂದಿರುವ ದೆಂಬುದು ಉಲ್ಲೇಖನಾರ್ಹ. ಅದರಂತೆಯೇ "ಜಾತಕ" (Jataka literature) ಭಾಷೆಯು ನೇಕಾರರ ಸಂಘ ಸಂಸ್ಥೆಗಳ ಬಗೆ ಉಲ್ಲೇಖಿಸುತ್ತದೆ. ಅಲ್ಲದೆ ಪ್ರಾಚೀನ ಮುಖ್ಯ ಜವಳಿ ಕೇಂದ್ರವಾದ ಮತ್ತು ರೇಷ್ಮೆ ವಸ್ತ್ರಗಳಿಗೆ ಹೆಸರಾದ ಬನಾರಸದ ಮಸ್ಲಿನ್ ಬಟ್ಟೆಗಳನ್ನು ಬುದ್ಧನ ಶವವನ್ನು ಸುತ್ತಿಡಲು ಬಳಸಿರುವದು ಇನ್ನೊಂದು ಉಲ್ಲೇಖನ.

ಕರಕುಶಲಿತೆಯ ಹತ್ತಿ ಬಟ್ಟೆಗಳನ್ನು ಉತ್ಪಾದಿಸುವ ರಾಜಾಶ್ರಯದ ಕೈಮಗ್ಗ ಕೇಂದ್ರಗಳ ಸುಳಿವನ್ನು ವೈರಿಗಳಿಗೆ ಒದಗಿಸುವ ಮತ್ತು ನೂಲನ್ನು ಕಳ್ಳತನಮಾಡುವ ಜನರಿಗೆ ದಂಡ ವಿಧಿಸುವ ವಿಷಯವು ಕ್ರಿ. ಶ. ಪೂ. ೪೦೦ ರಲ್ಲಿಯ ಕೌಟಿಲ್ಯನ ಅರ್ಥಶಾಸ್ತ್ರದಿಂದ ವಿದಿತ.

ಗ್ರೀಕರು ಮತ್ತು ರೋಮನ್‌ರು ಭಾರತದ ಬಟ್ಟೆಗಳಿಗೆ ಬಾಯ್ಬಿಡುತ್ತಿದ್ದರು. ಕರ್ನಾಟಕದಲ್ಲಿ ಉತ್ಪಾದಿಸಲ್ಪಟ್ಟ ಬಟ್ಟೆಗಳನ್ನು ಗ್ರೀಕ ದೇಶಕ್ಕೆ ನಿರ್ಯಾತಮಾಡಲಾಗುತ್ತಿತ್ತೆಂಬ ಅಂಶ ಇತ್ತೀಚಿನ ಸಂಶೋಧನೆಯಿಂದ ಬೆಳಕಿಗೆ ಬಂದಿದೆ. ರೋಮನ್ ಸಾಮ್ರಾಜ್ಯವು ಭಾರತ ಬಟ್ಟೆಗಳಿಗೆ ತನ್ನಲ್ಲಿರುವ ಎಲ್ಲ ಬಂಗಾರವನ್ನು ಕೊಟ್ಟು ಅದು ದಿವಾಳಿಯೆದ್ದಿತು ಎಂದು ರೋಮದ ಪ್ರಾಚೀನ ಲೇಖಕ "ಪ್ಲಿನೀ" ಯ ದೂರು.

ಪುರಾತನ ಕಾಲದಿಂದಲೂ ತನ್ನ ವೈಭವವನ್ನು ಮೆರೆಯಿಸಿಕೊಂಡು ಬಂದ ಭಾರತದ ಜವಳಿ ಉದ್ದಿಮೆಗೆ ಕಾರಣವಾದ ಒಳ್ಳೆಯ

ಹವಾಗುಣ ಮತ್ತು ಫಲವತ್ತಾದ ಮಣ್ಣಿನ ಗುಣ ಇವುಗಳನ್ನು ಹೊರತುಪಡಿಸಿ, ಗತಕಾಲದ ವೈಭವದ ವರ್ಣನೆಯನ್ನು ಪ್ರಾಚೀನ ಉಲ್ಲೇಖಗಳಿಂದ ಕಂಡುಕೊಳ್ಳಬಹುದು. ಉದ್ದಿಮೆಯ ನೈಜ ಪ್ರಗತಿಯು ಮೊಘಲರ ಆಳ್ವಿಕೆಯಿಂದ ಪ್ರಾರಂಭವಾಯಿತು. ಆ ಕಾಲದಲ್ಲಿಯ ವೈವಿಧ್ಯಮಯ ಹತ್ತಿಬಟ್ಟೆಗಳ ನಮೂನೆಯೇ ಇದಕ್ಕೆ ಸಾಕ್ಷಿ. ಆದಾಗ್ಯೂ ಪ್ರಾಚೀನ ವಿಗ್ರಹಗಳು ಮತ್ತು ಕರ್ಣ ಕುಂಡಲಗಳು ವಸ್ತ್ರ ವಿನ್ಯಾಸ ಮತ್ತು ಆಗಿನ ಕಾಲದಲ್ಲಿ ಪ್ರಚಲಿತ ವಿರುವ ಫ್ಯಾಷನ್ನುಗಳ ಬಗ್ಗೆ ತಮ್ಮದೇ ಆದ ಕಥೆಗಳನ್ನು ಸಾರಿ ಹೇಳುತ್ತಿವೆ.

ಸಾಂಚಿ, ಬಾರ್ಹತ್, ಅಮರಾವತಿ, ನಾಗಾರ್ಜುನಕೊಂಡ, ಜಗ್ಗಯ್ಯಪೇಟ ಮತ್ತು ಖಜುರಾಹೋ ಶಿಲ್ಪಮೂರ್ತಿಗಳನ್ನು ಕಡಿಮೆ ಬಟ್ಟೆಧರಿಸಿದಂತೆ ಶಿಲ್ಪಕಾರರು ಚಿತ್ರಿದ್ದನ್ನು ನೋಡಿದರೆ, ಆಗಿನ ಕಾಲದಲ್ಲಿ ಫ್ಯಾಷನ್ನು ಪ್ರಚಲಿತವಾಗಿತ್ತೆಂದು ನಿದರ್ಶನ. ಆದರೆ ಬಟ್ಟೆಯ ಉತ್ಪಾದನೆಯಾಗಲಿ ಅಥವಾ ಬೇಡಿಕೆಯಾಗಲಿ ಇಲ್ಲವೆಂದರ್ಥವಲ್ಲ. ಆ ಮೂರ್ತಿಗಳು ಹೊದೆದುಕೊಂಡ ಸೀರೆ ಮತ್ತು ಧೋತರ ಬಟ್ಟೆಯ ವಿನ್ಯಾಸ ಪ್ರಚಲಿತದಲ್ಲಿದ್ದ. ಬಟ್ಟೆಯ ವಿನ್ಯಾಸವು ನೇಕಾರರ ಕರಕುಶಲತೆಯನ್ನು ಎತ್ತಿ ತೋರಿಸುವ ಉತ್ತಮ ನಿದರ್ಶನಗಳಾಗಿವೆ. ಅದೇ ಕಾಲಕ್ಕೆ ಮೈತುಂಬ ಹೊದೆದುಕೊಂಡ ಬುದ್ಧ ಸನ್ಯಾಸಿಗಳ ವಿಗ್ರಹಗಳನ್ನು ವಿಶ್ಲೇಷ ಣಾತ್ಮಕ ದೃಷ್ಟಿಯಿಂದ ನೋಡಿದಾಗ ಬಟ್ಟೆಗಳಲ್ಲಿರುವ ಕರಕುಶಲ ತೆಯ ಆಲೇಖ್ಯವನ್ನು ಸ್ಮರಿಸಬಹುದಾಗಿದೆ.

ಮೊಗಲರ ಆಳ್ವಿಕೆಯು ಪ್ರಾರಂಭವಾಗುವುದಕ್ಕಿಂತ ಮುಂಚೆ ಪಶ್ಚಿಮ ಭಾರತದಲ್ಲಿ ಸುರತ್, ಕ್ಯಾಂಬೆ ಮತ್ತು ಬುರ್ಹಾನಪುರ, ಪೂರ್ವದಲ್ಲಿ ಢಾಕಾ ಮತ್ತು ಬನಾರಸ ಹಾಗೂ ದಕ್ಷಿಣದಲ್ಲಿ ಕೋರಮಂಡಲ ಮುಂತಾದವುಗಳು ನೇಯ್ಗೆಯ ಕೇಂದ್ರಗಳಾಗಿದ್ದುವು. ಈಜಿಪ್ತದಲ್ಲಿ ಕಂಡುಬರುವ ಬಟ್ಟೆಗಳ ಮೂಲಸ್ಥಾನ ಗುಜರಾತ್ ನೇಯ್ಗೆ ಕೇಂದ್ರಗಳು. ಅಲ್ಲದೆ "ಕಲಮಕರಿ" (Kalamakari) ಹೆಸರಿನ ಪ್ರಿಂಟ ಬಟ್ಟೆಗಳಿಗೆ ಆಂಧ್ರಪ್ರದೇಶದ ಮಚಲಿಪಟ್ಟಣಮ್ ಮುಖ್ಯ ಕೇಂದ್ರ. ಈ ಕೇಂದ್ರಕ್ಕೆ ಕಾಳಹಸ್ತಿ, ಪೆಟಬೊಲಿ, ದೇವನಪಟ್ಟಣಮ್ ಮತ್ತು ತಿಪ್ಪಾಪಲಿಯೂರು ಮುಂತಾದ ನೇಯ್ಗೆಗಳಿಂದ ಪ್ರಿಂಟ ಬಟ್ಟೆಗಳನ್ನು ಪೂರೈಸಲಾಗುತ್ತಿತ್ತು. ಮಚಲಿಪಟ್ಟಣಮ್‌ದ ಪ್ರಿಂಟ ಮತ್ತು ಆಲೇಖ್ಯವುಳ್ಳ ವಸ್ತುಗಳು ಅನೇಕ ವಿದೇಶಿಯರನ್ನು ಆಕರ್ಷಿಸಿತು. ಈಗ ಅದು ಪರ್ಶಿಯನ್ ಮಾದರಿಯ ವಸ್ತ್ರಗಳ ಉತ್ಪಾದನೆಗೆ ಹೆಸರಾಗಿದೆ.

ಗುಜರಾತದ ಕರಕುಶಲ ನೇಕಾರರು ಉತ್ಪಾದಿಸಿದ "ಚಿಪ್ಪಾ" (Chippas) ಪ್ರಿಂಟ ಬಟ್ಟೆಗಳಿಗೆ ಹೆಸರಾದವರು. ಅವರು ಉತ್ಪಾದಿಸುತ್ತಿರುವ ಚಿಪ್ಪಾ ಪ್ರಿಂಟ ಬಟ್ಟೆಗಳು ಧಾರ್ಮಿಕ ಕಥೆಗಳನ್ನು ಪ್ರತಿಬಿಂಬಿಸುತ್ತವೆ. ಸದ್ಯದಲ್ಲಿ ಅಹಮ್ಮದಾಬಾದದ ಹತ್ತಿರವಿರುವ ಪೇಠಾಪುರ ಹಳ್ಳಿಯ ನೇಕಾರರು ಅಗತ್ಯವಿರುವ ಚಿಪ್ಪಾ ಪ್ರಿಂಟ ಬಟ್ಟೆಗಳನ್ನು ಪೂರೈಸುತ್ತಿರುವುದು ನೇಕಾರರ ಕುಶಲತೆಗೆ ಸಾಕ್ಷಿ.

ಹತ್ತಿ ಬಟ್ಟೆಗಳ ಉತ್ಕೃಷ್ಟತೆಗೆ ಢಾಕಾ ಮಸ್ಲಿನ್ ಬಟ್ಟೆಗಳು ಇನ್ನೊಂದು ರೀತಿಯ ಕಲಶ. ಈ ಬಟ್ಟೆಗಳು ಪ್ರಪಂಚದ ಯಾವುದೇ ರೀತಿಯ ಬಟ್ಟೆಗಳನ್ನು ಮೀರಿಸುವಂತಹವುಗಳು.

ಪ್ರಿಂಟ ಬಟ್ಟೆ, ಬಣ್ಣದ ಬಟ್ಟೆ ಮತ್ತು ಮನೆಯ ಅಲಂಕಾರಗಳಿಗೆ ಬಳಸುವ ಬಟ್ಟೆಗಳ ಉಪಯೋಗವನ್ನು ನಿಷೇಧಿಸುವ ಸಲುವಾಗಿ ಬ್ರಿಟಿಷ್ ಸರಕಾರವು ೧೭೨೧ ರಲ್ಲಿ **ಕ್ಯಾಲಿಕೊ ಆ್ಯಕ್ಟನ್ನು** ಪಾಸುಮಾಡಿತು. ಬ್ರಿಟಿಷರ ಮಲತಾಯಿ ಧೋರಣೆಯಿಂದಾಗಿ ಹಾಗು ಬ್ರಿಟನ್‍ದ ಉತ್ಕರ್ಷೆಗಾಗಿ ಕೈಕೊಳ್ಳುವ ಕಂಪನಿ ಸರಕಾರದ ನೀತಿಯಿಂದಾಗಿ ಭಾರತದ ಹತ್ತಿಬಟ್ಟೆ ಉದ್ಯಮವು ತನ್ನ ಅವನತಿಯ ದಾರಿಹಿಡಿಯಿತು.

೨. ನೇಕಾರಿಕೆ ಸಮಾಜವಾದಕ್ಕೆ ಒಂದು ಅಡಿಪಾಯ

"Cottage Industries mean wealth for the poor, wealth brings dignity, the end of untouchability and other social sufferings"

— Mahatma Gandhi.

ಭಾರತದಂತಹ ಪ್ರಜಾಸತ್ತಾತ್ಮಕ ಬೃಹತ್ ರಾಷ್ಟ್ರವೊಂದರಲ್ಲಿ ಗುಡಿಕೈಗಾರಿಕೆಗಳು ಸಮಾಜವಾದಿ ಸ್ವರೂಪದ ಸಮಾಜವೆಂಬ ಗೋಪುರಕ್ಕೆ ಭದ್ರ ಅಡಿಗಲ್ಲುಗಳಾಗಿವೆ. ಆರ್ಥಿಕ ಮತ್ತು ಸಾಮಾಜಿಕ ನ್ಯಾಯ ಒದಗಿಸುವದರಲ್ಲಿ ಅವುಗಳ ಪಾತ್ರ ಗಮನಾರ್ಹವಾಗಿವೆ. ನಮ್ಮ ದೇಶವು ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿದ ನಂತರ ಸಮ್ಮಿಶ್ರ ಆರ್ಥಿಕ ನೀತಿಯಿಂದ ಪಂಚವಾರ್ಷಿಕ ಯೋಜನೆಗಳ ಮುಖಾಂತರ ದೇಶದ ದಾರಿದ್ರ್ಯ ತೊಡೆದು ಹಾ

ಸರ್ವತೋಮುಖ ಪ್ರಗತಿಯನ್ನು ಕ್ರಮೇಣ ಸಾಧಿಸಿ ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯಲು ಐದು ಪಂಚವಾರ್ಷಿಕ ಯೋಜನೆಗಳನ್ನು ಕಾರ್ಯರೂಪಕ್ಕೆ ಳಿಸಿದರೂ ನಿರೀಕ್ಷಿತ ಫಲವನ್ನು ಸಾಧಿಸಲಾಗಲಿಲ್ಲ. ಇತ್ತೀಚಿಗೆ ಗಾಂಧೀವಾದಿಗಳು ಮತ್ತು ಆರ್ಥಿಕ ತಜ್ಞರು ಆರ್ಥಿಕ ಮತ್ತು ಸಾಮಾಜಿಕ ನ್ಯಾಯವನ್ನು ಕಲ್ಪಿಸಿಕೊಡಲು, ಜನಸಾಮಾನ್ಯರ ಆಶೋತ್ತರಗಳನ್ನು ಈಡೇರಿಸಲು ಗ್ರಾಮೀಣ ಮತ್ತು ಸಣ್ಣ ಪ್ರಮಾಣದ ಉದ್ದಿಮೆಗಳ ಉತ್ತರೋತ್ತರ ಪ್ರಗತಿಗೆ ಆದ್ಯತೆಯನ್ನು ನಿಡುತ್ತಿರುವದು ಪ್ರಶಂಸನೀಯ ಸಂಗತಿಯಾಗಿದೆ. ಇಂಥ ಕಾರ್ಯಕ್ರಮಗಳಲ್ಲಿ ರಾಷ್ಟ್ರದ ಅರ್ಥವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ ಕೈಮಗ್ಗ ಉದ್ಯಮದ ಕಾರ್ಯಕಲ್ಪದ ಕಾರ್ಯಕ್ರಮವು ಒಂದಾಗಿದೆ. ದೇಶದ ವಿವಿಧ ಪ್ರಾದೇಶಿಕ ವಲಯಗಳಲ್ಲಿ ಹಮ್ಮಿಕೊಂಡಿರುವ ಕೈಮಗ್ಗ ನೇಕಾರರಿಗೆ ವಿವಿಧ ಸೌಲಭ್ಯಗಳನ್ನು ನೀಡಿ, ಅವು ಚೇತರಿಸಿಕೊಳ್ಳುವಂತೆ ಮಾಡಿರುವದು ಗಮನಾರ್ಹದ ವಿಷಯವಾಗಿರುತ್ತದೆ.

ಸ್ವಾತಂತ್ರ್ಯದ ನಂತರ ಭಾರತದಲ್ಲಿ ಗಾಂಧೀಜಿಯವರು ನೇಕಾರಿಕೆಗೆ ಪ್ರಾಶಸ್ತ್ಯ ಕೊಡಲು ಹಲವಾರು ಕಾರಣಗಳನ್ನು ಕೊಂಡರು. ಪ್ರಥಮತಃ ಇದರ ಉದ್ದೇಶ ರಾಷ್ಟ್ರದ ಏಳು ಲಕ್ಷ ಹಳ್ಳಿಗಳಲ್ಲಿ ಅರೆಹೊಟ್ಟೆ ತಿಂದು, ಅರೆನಗ್ನರಾಗಿ ಜೀವಿಸುತ್ತಿದ್ದ ಕೋಟ್ಯಂತರ ಜನಸ್ತೋಮಕ್ಕೆ ಬದುಕಿನ ಆಶಾಕಿರಣ ಮೂಡಿಸುವಂತೆ ಮಾಡುವದಾಗಿತ್ತು. ಈ ನೇಕಾರಿಕೆ ಉದ್ಯಮಕ್ಕೆ ಹೆಚ್ಚಿನ ಆದ್ಯತೆಯನ್ನು ಪ್ರತಿಪಾದಿಸುವ ಗಾಂಧೀಜಿಯವರು ಕೊಟ್ಟ ಕಾರಣಗಳು ಕೆಳಗಿನಂತಿವೆ.

೧) ತಕ್ಷಣದ ಉದ್ಯೋಗವನ್ನು ಕಲ್ಪಿಸಬಲ್ಲದು.
೨) ಬಹು ಜನರಿಗೆ ಪರಿಚಯವಿರುವಂತಹದ್ದು.
೩) ಕಲಿಯಲು ಸುಲಭ.
೪) ಉದ್ಯಮಕ್ಕೆ ಅಗತ್ಯವಿರುವ ಬಂಡವಾಳ ತೀರ ಕಡಿಮೆ.
೫) ತಂತ್ರಜ್ಞಾನ ಕ್ಲಿಷ್ಟವಾಯವಾಗಿರದು.
೬) ಬಡವರಿಗೆ ಕೋಟ್ಯಂತರ ರೂಪಾಯಿಗಳನ್ನು ಹಂಚಬಲ್ಲದು.
೭) ಸಹಕಾರ ಬುದ್ಧಿಯನ್ನು ಕಲಿಸಲು ಶಕ್ತಿಯುತವಾದ ಸಾಧನ.
೮) ಲಕ್ಷಾಂತರ ಗ್ರಾಮೀಣ ಜನತೆಗೆ ಹೊಸ ಬದುಕಿನ ಭರವಸೆಯನ್ನು ಮೂಡಿಸುವಂಥದ್ದು.
೯) ಬಡತನಕ್ಕಿಂತ ಸೋಮಾರಿತನ ಕೆಟ್ಟದ್ದು. ಅದು ಎಲ್ಲ ಪಾಪಗಳ ಮೂಲ. ಅದನ್ನು ಈ ಉದ್ಯಮವು ನಿವಾರಿಸಬಲ್ಲದು.

ಸೇಕಾರಿಕೆಯ ಸಾಧ್ಯತೆಗಳನ್ನು ಗಾಂಧೀಜಿಯವರು ತುಂಬಾ ಬಣ್ಣಿಸಿದ್ದಾರೆ. ಅವು ಕೇವಲ ಮಾತುಗಳಾಗಿರದೇ, ವಾಸ್ತವರೂಪದಲ್ಲಿ ವ್ಯಕ್ತವಾದಂಥವುಗಳಾಗಿವೆ. ಮಾನವತೆ, ಅರ್ಥ ಉತ್ಪನ್ನ, ಸ್ವಾವಲಂಬನೆ, ಅಹಿಂಸೆ ಮತ್ತು ಸಮಾನತೆ ಇವುಗಳೆಲ್ಲ ಈ ಉದ್ಯಮದಲ್ಲಿ ಬೀಜರೂಪವಾಗಿ ಅಡಕವಾಗಿವೆ.

ಸೇಕಾರಿಕೆ ಉದ್ಯಮವು ಹತ್ತಿಬಟ್ಟೆ ನೇಯ್ಗೆ, ಉಣ್ಣೆಬಟ್ಟೆ ನೇಯ್ಗೆ ಮತ್ತು ರೇಷ್ಮೆಬಟ್ಟೆ ನೇಯ್ಗೆಯನ್ನು ಒಳಗೊಂಡಿರುತ್ತದೆ.

ನೇಯ್ಗೆ ಉದ್ಯಮದ ಚಟುವಟಿಕೆಗಳಲ್ಲಿ ನಿರತರಾದವರಲ್ಲಿ ಶೇಕಡಾ ೯೦ರಷ್ಟು ಜನರು ಹತ್ತಿಬಟ್ಟೆ ನೇಯ್ಗೆಯಲ್ಲಿ ತೊಡಗಿರುತ್ತಾರೆ. ಪ್ರಸ್ತುತದಲ್ಲಿ ಕೃಷಿಯನಂತರ ಕೈಮಗ್ಗ ಉದ್ಯಮವು ಬಹುಜನರ ಜೀವನೋಪಾಯದ ಮೂಲವಾಗಿರುತ್ತದೆ. ೧೯೬೧ರಲ್ಲಿ ದೇಶದಲ್ಲಿರುವ ಒಟ್ಟು ಕೈಮಗ್ಗಗಳ ಸಂಖ್ಯೆ ಸುಮಾರು ೨೧.೩೫ ಲಕ್ಷಗಳಷ್ಟು. ೧೯೭೪ರಲ್ಲಿ ಸುಮಾರು ೩೫.೬೩ ಲಕ್ಷ ಮತ್ತು ೩೮.೦೭ ಲಕ್ಷಗಳಷ್ಟಿತ್ತು. ಅಂದರೆ ದೇಶದಲ್ಲಿರುವ ಒಟ್ಟು ಫ್ಯಾಕ್ಟರಿ ಕೂಲಿಕಾರರಲ್ಲಿ ಸುಮಾರು ಶೇಕಡಾ ೪೦ ರಷ್ಟು ಜನರು ಕೈಮಗ್ಗ ಉದ್ದಿಮೆಯಲ್ಲಿ ತೊಡಗಿರುವವರು. ೧೯೬೩ರಲ್ಲಿ ಗಿರಣಿ ಬಟ್ಟೆಯ ಉತ್ಪಾದನೆಯು ೪೧೭೯ ದ.ಲ.ಮೀಟರುಗಳಷ್ಟು, ಪಾವರಲೂಮು ಮತ್ತು ಕೈಮಗ್ಗ ಬಟ್ಟೆಯ ಉತ್ಪಾದನೆಯು ೩೬೦೨ ದ.ಲ.ಮೀಟರುಗಳಷ್ಟಿದ್ದರೆ ೧೯೭೯ರಲ್ಲಿ ಉತ್ಪಾದನೆಯು ಅನುಕ್ರಮವಾಗಿ ೩೨೦೬ ದ.ಲ.ಮೀ. ಮತ್ತು ೪೩೩೪ ದ.ಲ.ಮೀಟರುಗಳಿಗೇರಿತು. ಅಂದರೆ ೧೯೭೯ ರಲ್ಲಿ ಒಟ್ಟು ಬಟ್ಟೆಯ ಉತ್ಪಾದನೆಯಲ್ಲಿ ವಿಕೇಂದ್ರಿತ. ವಲಯದ ಕೈಗಾರಿಕೆಗಳು ಶೇಕಡಾ ೫೬.೫ ರಷ್ಟು ಉತ್ಪಾದಿಸುತ್ತಿದ್ದವು. ಅಲ್ಲದೆ ಕೈಮಗ್ಗ ಬಟ್ಟೆಯ ನಿರ್ಯಾತವು ೧೯೫೫-೫೬ರಲ್ಲಿ ೮.೪ ಕೋಟಿ. ರೂ.ಗಳಷ್ಟಿದ್ದರೆ, ೧೯೭೪-೭೫ ರಲ್ಲಿ ೮೬.೮ ಕೋಟಿ. ರೂ. ಗಳಷ್ಟು ಮತ್ತು ೧೯೭೯-೮೦ರಲ್ಲಿ ೧೭೦.೦ ಕೋಟಿ. ರೂ.ಗಳಷ್ಟಾಯಿತು. ಈ ಅಂಕಿ ಅಂಶಗಳಿಂದ ಕೈಮಗ್ಗ ಉದ್ಯಮದ ಪ್ರಾಮುಖ್ಯತೆ ಎಷ್ಟೆಂಬುದು ಗೊತ್ತಾದರೂ, ಅದನ್ನು ಯೋಜಿತವಾಗಿ ಅಭಿವೃದ್ಧಿ ಪಡಿಸುವ ಕಾರ್ಯಕ್ರಮಗಳನ್ನು ಕೈಕೊಳ್ಳದಿರುವದು ವಿಷಾದನೀಯ ಸಂಗತಿಯಾಗಿದೆ.

ಗ್ರಾಮೀಣ ಭಾರತದಲ್ಲಿರುವ ಎಲ್ಲ ಬಡ ಜನಾಂಗ ವರ್ಗದ ವರು ಯೋಜನಾ ನಿರ್ಮಾಪಕರ ಗಮನ ಸೆಳೆದಿದ್ದಾಗ್ಯೂ, ಸುಮಾರು ೨೦ ಲಕ್ಷ ಜನ ಗ್ರಾಮೀಣ ನೇಕಾರರ ಆಶೋತ್ತರಗಳ ಬಗ್ಗೆ ಯಾರೂ ಗಮನಕೊಡಲಿಲ್ಲ. ಪ್ರದಾನಿ ಶ್ರಿಮತಿ ಇಂದಿರಾ ಗಾಂಧಿ ಅವರ ೨೦ ಅಂಶಗಳ ಆರ್ಥಿಕ ಕಾರ್ಯಕ್ರಮಗಳಲ್ಲಿ ನೇಕಾರರ ಪ್ರಗತಿಗೆ ಒಂದು ಅಂಶದ ಕಾರ್ಯಕ್ರಮವು ಮೀಸಲಾಗಿರುವದು ಸ್ವಾಗತಾರ್ಹ.

ರಾಷ್ಟ್ರದ ವಿವಿಧ ರಾಜ್ಯಗಳಲ್ಲಿ ಹಮ್ಮಿಕೊಂಡಿರುವ ನೇಕಾರರ ಸಮಸ್ಯೆಗಳು ಒಂದೇ ತೆರನಾಗಿರದೆ, ಭಿನ್ನವಾಗಿರುತ್ತವೆ. ನೇಕಾರರು ಬಳಸುತ್ತಿರುವ ತಂತ್ರ ಪ್ರವಿಧಿಯು ಭಿನ್ನವಾಗಿರುವದರಿಂದ, ನೇಕಾರರ ಯೋಜಿತ ಪ್ರಗತಿಗೆ ಕೈಕೊಂಡ ಧೋರಣೆಗಳು ಆಯಾ ಸಮಸ್ಯೆಗಳಿಗೆ ತಕ್ಕ ಪರಿಹಾರಗಳನ್ನು ನೀಡುವಂತಹವುಗಳಾಗಿರಬೇಕು. ಮಣಿಪುರ ಮತ್ತು ಆಸಾಮ ರಾಜ್ಯಗಳಲ್ಲಿ ಹಮ್ಮಿಕೊಂಡಿರುವ ಈ ಉದ್ಯಮವು ವಾಣಿಜ್ಯ ಸ್ವರೂಪದ್ದಾಗಿರದೆ, ಬಹು ಜನ ನೇಕಾರರು ತಮ್ಮ ಸ್ವಂತ ಉಪಭೋಗಕ್ಕೆ ಅಗತ್ಯವಿರುವ ಬಟ್ಟೆಗಳನ್ನು ನೇಯುವಂತವರಾಗಿರುತ್ತಾರೆ. ತಮಿಳುನಾಡು, ಆಂಧ್ರ ಪ್ರದೇಶ ಮತ್ತು ಓರಿಸ್ಸಾ ರಾಜ್ಯಗಳಲ್ಲಿ ಒಟ್ಟು ಕೂಲಿಕಾರರಲ್ಲಿ ಬಹು ಜನರು ಜೀವನೋಪಾಯಕ್ಕಾಗಿ ಈ ಕೈಗಾರಿಕೆಯನ್ನವಲಂಬಿಸಿರುವದು ಕಂಡುಬರುವದು.

ದೇಶದ ವಿವಿಧ ರಾಜ್ಯಗಳಲ್ಲಿ ಹರಡಿಕೊಂಡ ಕೈಮಗ್ಗಗಳ ಚಿತ್ರಣವನ್ನು ಕೆಳಗಿನ ಅಂಕಿ-ಅಂಶಗಳಿಂದ ಕಂಡುಕೊಳ್ಳಬಹುದಾಗಿದೆ.

ವಿವಿಧ ರಾಜ್ಯಗಳಲ್ಲಿರುವ ಕೈಮಗ್ಗಗಳ ಸಂಖ್ಯೆ
(೧೯೭೮ ರಲ್ಲಿ)

ರಾಜ್ಯದ ಹೆಸರು	ಕೈಮಗ್ಗಗಳ ಸಂಖ್ಯೆ (ಲಕ್ಷಗಳಲ್ಲಿ)	ಶೇಕಡಾ ಪ್ರಮಾಣ
ಆಂಧ್ರ ಪ್ರದೇಶ	೫.೯೭	೧೫.೭
ಆಸ್ಸಾಮ	೫.೯೦	೧೫.೫
ಬಿಹಾರ	೨.೧೦	೫.೩
ಗುಜರಾತ	೦.೩೪	೧.೯
ಹರ‍್ಯಾಣಾ	೦.೫೦	೧.೩
ಹಿಮಾಚಲ ಪ್ರದೇಶ	೦.೦೨	—
ಜಮ್ಮು ಮತ್ತು ಕಾಶ್ಮೀರ	—	—
ಕರ್ನಾಟಕ	೧.೩೭	೩.೬
ಕೇರಳ	೦.೭೧	೧.೯
ಮಧ್ಯ ಪ್ರದೇಶ	೦.೫೩	೧.೪
ಮಹಾರಾಷ್ಟ್ರ	೧.೮೫	೪.೯
ಮಣಿಪುರ	೨.೦೦	೫.೩
ಮೇಘಾಲಯ	೦.೦೩	—
ನಾಗಾಲ್ಯಾಂಡ್	೦.೫೦	೧.೩
ಓರಿಸ್ಸಾ	೦.೮೭	೨.೩
ಪಂಜಾಬ	೦.೧೮	೦.೫
ರಾಜಸ್ಥಾನ	೧.೪೨	೩.೭
ಸಿಕ್ಕಿಮ	—	—

ತಮಿಳುನಾಡು	೫.೫೦	೧೪.೫
ತ್ರಿಪುರಾ.	೧.೨೩	೩.೨
ಉತ್ತರ ಪ್ರದೇಶ	೫.೦೯	೧೩.೪
ಪಶ್ಚಿಮ ಬಂಗಾಲ	೧.೯೮	೫.೨
ದೆಹಲಿ	೦.೦೩	—
ಪಾಂಡಿಚೇರಿ	೦.೦೪	೦.೧
ಒಟ್ಟು	೩೮.೦೭	೧೦೦.೦೦

ಸ್ವಾತಂತ್ರ್ಯ ನಂತರದೀಚೆಗೆ ಸರಕಾರವು ಕೈ ಮಗ್ಗ ಉದ್ಯಮಗಳ ಬಗ್ಗೆ ವಿಸ್ತೃತ ಕಾರ್ಯಕ್ರಮಗಳನ್ನು ಕೈಕೊಂಡರೂ ಅವೆಲ್ಲವುಗಳು ಅರೆಮನಸ್ಸಿನ ಧೋರಣೆಗಳಾದ್ದರಿಂದ ಉದ್ಯಮವು ಎದುರಿಸುತ್ತಿರುವ ಸಮಸ್ಯೆಗಳಿಗೆ ಶಾಶ್ವತ ಪರಿಹಾರಗಳು ದೊರಕಿದಂತಾಗಲಿಲ್ಲ. ಕೇಂದ್ರ ಸರಕಾರವು ೧೯೭೩ ಡಿಸೆಂಬರ್ ೨೯ ರಂದು ಶ್ರೀ. ಬಿ. ಶಿವರಾಮನ್ ಅವರ ನೇತೃತ್ವದಲ್ಲಿ ಕೈ ಮಗ್ಗಗಳ ಯೋಜಿತ ಪ್ರಗತಿಗೆ ಸಂಬಂಧಿಸಿದಂತೆ ತಜ್ಞ ಸಮಿತಿಯೊಂದನ್ನು ನೇಮಿಸಿತು. ಈ ತಜ್ಞ ಸಮಿತಿಯ ಶಿಫಾರಸುಗಳು ನೇಕಾರರಿಗೆ ನ್ಯೂ ಡೀಲ (New Deal) ಧೋರಣೆಗಳಂತಿರುತ್ತವೆ. ಸಮಿತಿಯ ವರದಿಯನ್ನೊಳಗೊಂಡ ಮತ್ತು ಪಾರ್ಲಿಮೆಂಟಿನ ಅಂದಾಜು ಸಮಿತಿ(Estimate Committee)–೧೯೭೭ ರ ವರದಿಯ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಕೇಂದ್ರ ಸರಕಾರವು ಆಗಸ್ಟ ೭. ೧೯೭೮ರಲ್ಲಿ ಹೊಸ ಜವಳಿ ನೀತಿ (New Textile Policy) ಯೊಂದನ್ನು ಪ್ರಚುರ ಪಡಿಸಿತು. ಈ ನೀತಿಯು ಕೈಮಗ್ಗ ಉದ್ಯಮದ ವಿಸ್ತೃತ ಬೆಳವಣಿಗೆಗೆ ಅನುವು ಮಾಡಿಕೊಟ್ಟಿದೆ.

೩. ನೇಕಾರಿಕೆ ಉದ್ದಿಮೆಯ ಮಹತ್ವ

"Smaller Enterprise is essential to a sound and prosperous national Economy."

ಭಾರತದಂತಹ ಹಿಂದುಳಿದ ರಾಷ್ಟ್ರಗಳ ಅರ್ಥ ವ್ಯವಸ್ಥೆಯಲ್ಲಿ ಸಣ್ಣ ಪ್ರಮಾಣದ ಉದ್ದಿಮೆಗಳ ಪಾತ್ರ ಗಮನಾರ್ಹವಾದುದು. ಒಂದೆಡೆ ಮಿತಿ-ಮೀರಿ ಬೆಳೆಯುತ್ತಿರುವ ಜನಸಂಖ್ಯೆ ಇನ್ನೊಂದೆಡೆ ಬಂಡವಾಳದ ಕೊರತೆಯನ್ನು ಅನುಭವಿಸುತ್ತಿರುವ ರಾಷ್ಟ್ರಗಳಲ್ಲಿ ನೇಕಾರಿಕೆಯನ್ನೊಳಗೊಂಡ ಸಣ್ಣ ಪ್ರಮಾಣದ ಉದ್ಯಮಗಳು ಪರಿಹಾರವನ್ನೊದಗಿಸುತ್ತವೆ. ಪ್ರಸಕ್ತ ಆರ್ಥಿಕ ಸ್ಥಿತಿಯಲ್ಲಿ ಕಿರಿಯ ಉದ್ಯಮಗಳ ಸ್ಥಾಪನೆಯಿಂದಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಜನಸಂಖ್ಯೆ ಮತ್ತು ಬಂಡವಾಳದ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಸಾಧ್ಯವಿದೆ ಎಂದು ಸರ್ ಬಾಮ್ ಮತ್ತು ಯೇಮಿ ಅವರು ಅಭಿಪ್ರಾಯ ತಳೆದಿರುವದು ಪ್ರಶಂಷಾರ್ಹ ಸಂಗತಿಯಾಗಿದೆ.

ಶ್ರಮ ಪ್ರಧಾನವಾದ ನೇಕಾರಿಕೆ ಉದ್ದಿಮೆಯು ರಾಷ್ಟ್ರದ ಅರ್ಥವ್ಯವಸ್ಥೆಯಲ್ಲಿ ಎಂಥ ವಿಧವಾದ ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂಬುದನ್ನು ಸಂಕ್ಷಿಪ್ತವಾಗಿ ವಿವೇಚಿಸಬಹುದಾಗಿದೆ.

(೧) ಉತ್ಪನ್ನದಲ್ಲಿ ಹೆಚ್ಚಳ :

ಭಾರತ ಕೃಷಿ ಪ್ರಧಾನವಾದ ದೇಶ. ಕೃಷಿಯು ಬಹುಜನರ ಜೀವನೋಪಾಯದ ಮೂಲ. ವರ್ಷದ ಹನ್ನೆರಡೂ ತಿಂಗಳು

ಕೃಷಿಯು ಉದ್ಯೋಗಾವಕಾಶ ಕಲ್ಪಿಸಿಕೊಡುವದಿಲ್ಲ. ವರ್ಷದ ಕೆಲವೊಂದು ತಿಂಗಳು ರೈತರು ನಿರುದ್ಯೋಗಿಗಳಾಗುವರು. ವಿಕೇಂದ್ರಿತ ವಲಯದಲ್ಲಿರುವ ನೇಕಾರಿಕೆಯು ಕೃಷಿಕರಿಗೆ ತಾತ್ಪಾರ್ತಿಕ ಉದ್ಯೋಗಾವಕಾಶವನ್ನು ಕಲ್ಪಿಸುವದರಿಂದ ರೈತರ ವರಮಾನ ಅಧಿಕಗೊಳ್ಳುವದರಲ್ಲಿ ಸಂದೇಹವಿಲ್ಲ. ನೇಯ್ಗೆಯ ಚಟುವಟಿಕೆಗಳಿಂದ ಪ್ರತಿ ದಿನದ ವರಮಾನವು ೩.೫೦ ರೂ. ಗಳಷ್ಟು.

(೨) ಅಧಿಕ ಉದ್ಯೋಗಾವಕಾಶ :

ಆರ್ಥಿಕ ಯೋಜನೆಗಳ ಫಲವಾಗಿ ನಮ್ಮ ದೇಶವು ಪ್ರಪಂಚದಲ್ಲಿ ಕೈಗಾರಿಕಾ ದೃಷ್ಟಿಯಿಂದ ಎಂಟನೆಯ ಸ್ಥಾನವನ್ನು ಗಳಿಸಿದರೂ ಬಹುಸಂಖ್ಯಾ ಜನರು ಉದ್ಯೋಗಾವಕಾಶಗಳಿಲ್ಲದೆ ನಿರ್ಗತಿಕರ ಬಾಳನ್ನು ನಿರ್ವಹಿಸುತ್ತಿರುವದು ಶೋಚನೀಯ ಸಂಗತಿ. ಬಡತನ ರೇಖೆಗಿಂತ ಕೆಳಮಟ್ಟದ ಜೀವನ ನಡೆಸುವವರ ಸಂಖ್ಯೆ ೨೯೪ ದಶ ಲಕ್ಷಗಳಷ್ಟು. ಬಡವರ ಮತ್ತು ನಿರುದ್ಯೋಗಿಗಳ ಪ್ರಮಾಣ ೨೦.೫ ದಶಲಕ್ಷಗಳಷ್ಟು. ಬಡಜನರು ತಮ್ಮ ಆಶೋತ್ತರಗಳನ್ನು ಈಡೇರಿಸಿಕೊಳ್ಳಬೇಕಾದರೆ ಕಿರಿಯ ಪ್ರಮಾಣದ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬೇಕಾಗುವದು ಅನಿವಾರ್ಯ. ಇದರಲ್ಲಿ ನೇಕಾರಿಕೆ ಉದ್ದಿಮೆಯ ಪಾತ್ರ ಗಮನಾರ್ಹವಾದುದು. ೧೯೭೭–೭೮ ರಲ್ಲಿ ಈ ಉದ್ದಿಮೆಯು ೫೭.೧೦ ಲಕ್ಷ ಜನರಿಗೆ ಉದ್ಯೋಗಗಳನ್ನು ಕಲ್ಪಿಸಿಕೊಟ್ಟಿತು. ನೇಕಾರಿಕೆ ಉದ್ದಿಮೆಯನ್ನು ಯೋಜಿತವಾಗಿ ಸಂಘಟಿಸಿದಲ್ಲಿ ಇದು ೧೯೮೨–೮೩ ರಲ್ಲಿ ಸುಮಾರು ೬೨ ಲಕ್ಷ ಜನರಿಗೆ ಉದ್ಯೋಗ ಕಲ್ಪಿಸಬಲ್ಲದು ಎಂದು ತಜ್ಞರ ಅಭಿಪ್ರಾಯ.

(೩) ಆರ್ಥಿಕ ಸಮಾನತೆ :

ಸಮಾಜವಾದಿ ಸ್ವರೂಪದ ಪ್ರಜಾಸತ್ತೆಯನ್ನು ರೂಪಿಸಲು ಕೇಂದ್ರೀಕೃತ ಆರ್ಥಿಕ ಶಕ್ತಿಯನ್ನು ವಿಕೇಂದ್ರೀಕರಣಗೊಳಿಸುವದು ಅವಶ್ಯಕ. ಆರ್ಥಿಕ ಯೋಜನೆಗಳ ಫಲ ಕೆಲವೇ ಜನರ ಕೈಯಲ್ಲಿ ಕೇಂದ್ರೀಕೃತಗೊಂಡಿರುವದರಿಂದ ಬಡವರು ಮತ್ತು ಶ್ರೀಮಂತರ ನಡುವಿನ ಭಿನ್ನತೆಯು ಹೆಚ್ಚುತ್ತಿರುವದು. ಇದರಿಂದಾಗಿ ಸಮಾಜವಾದವು ಈ ದೇಶದಲ್ಲಿ ನಾಟಕೀಯವಾಗಿ ತೋರುತ್ತಿದೆ. ಇದನ್ನು ನಿವಾರಿಸಲು ಎಲ್ಲ ಜನರ ಜೀವನಮಟ್ಟವನ್ನು ಹೆಚ್ಚಿಸುವಂಥ ನೇಕಾರಿಕೆ ಉದ್ದಿಮೆಯನ್ನು ಅಭಿವೃದ್ಧಿ ಪಡಿಸುವದು ಅತ್ಯಗತ್ಯವಾಗಿದೆ. ಇದರಿಂದ ಉತ್ಪತ್ತಿಯಾಗುವ ಸಂಪತ್ತು ಎಲ್ಲರಲ್ಲಿಯೂ ಹಂಚಲ್ಪಟ್ಟು ಆರ್ಥಿಕ ಸಮಾನತೆಯನ್ನು ಸಾಧಿಸಲು ಸಹಾಯವಾಗುತ್ತದೆ.

(೪) ಪ್ರಾದೇಶಿಕ ಸಮತೋಲನಾಭಿವೃದ್ಧಿ :

ರಾಷ್ಟ್ರದ ಅಭಿವೃದ್ಧಿಗೆ ಎಲ್ಲ ಪ್ರದೇಶಗಳು ಸಮತೋಲನವಾಗಿ ಪ್ರಗತಿ ಹೊಂದಬೇಕಾಗಿರುವದು ಅತ್ಯಗತ್ಯ. ಆದರೆ ಯೋಜನೆಗಳ ದೋಷದಿಂದಾಗಿ ನಗರೀಕರಣವು ತ್ವರಿತಗೊಂಡದ್ದಲ್ಲದೆ, ಅನೇಕ ಪ್ರದೇಶಗಳು ಸಹ ಕೈಗಾರಿಕಾ ದೃಷ್ಟಿಯಿಂದ ಹಿಂದುಳಿದಿವೆ. ಹಿಂದುಳಿದ ಪ್ರದೇಶಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಪೂರ್ಣ ಬಳಸಿಕೊಳ್ಳಲು, ಆಯಾ ಭಾಗದ ನಿರುದ್ಯೋಗಿಗಳಿಗೆ ಉದ್ಯೋಗಗಳನ್ನು ಕಲ್ಪಿಸಿಕೊಡಲು ನೇಕಾರಿಕೆಯಂತಹ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸುವದು ತೀರಾ ಉಚಿತ.

(೫) ಸಂಪನ್ಮೂಲಗಳ ಪೂರ್ಣ ಬಳಕೆ :

ದೇಶದ ತ್ವರಿತಗತಿಯ ಪ್ರಗತಿಗೆ ಪ್ರಕೃತಿದತ್ತ ನಿಸರ್ಗ ಸಂಪನ್ಮೂಲ ಮತ್ತು ಮಾನವ ಸಂಪನ್ಮೂಲಗಳ ಪೂರ್ಣ ಬಳಕೆ ಅತೀ ಅಗತ್ಯ. ಇವುಗಳನ್ನು ಪೂರ್ಣ ಬಳಸಿಕೊಳ್ಳುವದರಲ್ಲಿ ಕೈಮಗ್ಗ ಉದ್ದಿಮೆಯು ಹೆಚ್ಚು ಸಹಾಯಕಾರಿಯಾಗುತ್ತದೆ. ಭಾರಿ ಪ್ರಮಾಣದ ಕೈಗಾರಿಕೋದ್ಯಮಗಳಿಗೆ ಅಗತ್ಯವಿರುವ ಯಂತ್ರ ಸರಂಜಾಮು, ಕಚ್ಚಾಸರಕು ಮತ್ತು ತಾಂತ್ರಿಕ-ಜ್ಞಾನ ಮುಂತಾದವುಗಳನ್ನು ಪರರಾಷ್ಟ್ರಗಳಿಂದ ಆಯಾತ ಮಾಡಿಕೊಳ್ಳ ಬೇಕಾಗುವದು. ಇದಕ್ಕೆ ಅನವಶ್ಯಕವಾಗಿ ವಿದೇಶಿ ವಿನಿಮಯದ ಸಂಗ್ರಹವು ಪೋಲಾಗುವದು. ದೇಶವು ವಿದೇಶಿ ಋಣದ ಸಮಸ್ಯೆಯನ್ನು ಎದುರಿಸುತ್ತಿರುವಾಗ ಸ್ವದೇಶಿ ಯಂತ್ರೋಪಕರಣ ಗಳನ್ನು ಬಳಸಿಕೊಂಡು, ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿ ಕೊಳ್ಳುವ ಕೈಮಗ್ಗ ಉದ್ದಿಮೆಗಳನ್ನು ಅಭಿವೃದ್ಧಿ ಪಡಿಸುವದು ಸಮಂಜಸಕರವಾದ ವಿಷಯ.

(೬) ಜೀವನಾವಶ್ಯಕ ವಸ್ತು "ಬಟ್ಟೆಯ" ಪೂರೈಕೆ :

ಜೀವನಕ್ಕೆ ಅನ್ನ, ವಸ್ತ್ರ, ಮತ್ತು ವಸತಿ ಇವೆಲ್ಲವುಗಳೂ ಅನಿವಾರ್ಯ. ಎಲ್ಲರಿಗೂ ತ್ರಿವರ್ಗೀಯ ಸರಕುಗಳನ್ನು ಒದಗಿಸಿ ಕೊಡುವದು ಪ್ರಜಾಸತ್ತಾತ್ಮಕ ರಾಷ್ಟ್ರಗಳ ಆದ್ಯ ಹೊಣೆಗಾರಿಕೆ. ಬಹುಸಂಖ್ಯಾ ಕಡುಬಡವರು ನಮ್ಮ ದೇಶದಲ್ಲಿ ವಸ್ತ್ರಗಳಿಲ್ಲದೆ ಅರೆನಗ್ನರಾಗಿ ಅಲೆದಾಡುತ್ತಿರುವದು ವಿಷಾದಕರ ಸಂಗತಿ ಯಾಗಿದೆ. ಬಂಡವಾಳ ಕೊರತೆಯಿರುವ ಈ ನಾಡಿನಲ್ಲಿ ಬೃಹತ್

ಪ್ರಮಾಣದ ಜವಳಿ ಗಿರಣಿಗಳನ್ನು ಪ್ರಾರಂಭಿಸಿ ವಸ್ತ್ರವನ್ನು ಪೂರೈಸುವದು ಅಸಾಧ್ಯದ ಮಾತು. ಅಲ್ಲದೆ ಬಡವರಿಗೆ ದುಬಾರಿ ಬೆಲೆಯ ಬಟ್ಟೆಯನ್ನು ಕೊಂಡುಕೊಳ್ಳುವದು ಕಷ್ಟದ ಕೆಲಸ. ಬಡತನದ ನಿವಾರಣೆಗೆ ಮುಖ್ಯ ಅಷ್ಟು ಉದ್ಯೋಗಾವಕಾಶ ನಿರ್ಮಿಸುವಿಕೆ. ಕಡಿಮೆ ಬಂಡವಾಳದಿಂದ ಬಹುಸಂಖ್ಯಾ ಜನರಿಗೆ ಉದ್ಯೋಗ ದೊರಕಿಸುವ ನೇಕಾರಿಕೆ ಉದ್ಯಮವನ್ನು ಪ್ರಾರಂಭಿಸಿದಲ್ಲಿ ಜನರಿಗೆ ಅನ್ನದೊಂದಿಗೆ ವಸ್ತ್ರದ ಸೌಲಭ್ಯ ಕಲ್ಪಿಸಿ ಕೊಟ್ಟಂತಾಗುವದು.

(೬) ವಿದೇಶಿ ವಿನಿಮಯ ಗಳಿಕೆ :

ದೇಶದ ಆರ್ಥಿಕ ಯೋಜನೆಗಳ ಅನುಷ್ಠಾನಕ್ಕೆ ವಿದೇಶಿ ವಿನಿಮಯದ ಗಳಿಕೆ ಅತ್ಯಗತ್ಯ. ವಿದೇಶಿ ವಿನಿಮಯದ ಗಳಿಕೆಯಲ್ಲಿ ಕೈಮಗ್ಗ ಉದ್ಯಮದ ಕೊಡುಗೆ ಗಮನಾರ್ಹ. ಕೈಮಗ್ಗ ಉದ್ಯಮವು ಉತ್ಪಾದಿಸಿದ ವಿನ್ಯಾಸದ ಬಟ್ಟೆಗಳಿಗೆ ಪ್ರಾಚ್ಯನಾಡುಗಳಲ್ಲಿ ಅಪಾರ ಬೇಡಿಕೆ. ೧೯೬೫–೬೬ ರಲ್ಲಿ ಈ ಉದ್ಯಮವು ೧೧ ಕೋಟಿ ರೂ. ಗಳ ಮೌಲ್ಯದ ವಸ್ತ್ರಗಳನ್ನು ನಿರ್ಯಾತಗೊಳಿಸಿದ್ದರೆ ೧೯೭೯–೮೦ರಲ್ಲಿ ೩೭೦ ಕೋಟಿರೂಗಳ ಮೌಲ್ಯದಷ್ಟು ಬಟ್ಟೆಯನ್ನು ಮತ್ತು ೧೯೮೦–೮೧ರ ಮೊದಲಿನ ಆರು ತಿಂಗಳುಗಳಲ್ಲಿ ೧೭೦ ಕೋಟಿರೂಗಳಷ್ಟು ಬಟ್ಟೆಯನ್ನು ನಿರ್ಯಾತಗೊಳಿಸಿತು. ೧೯೮೨–೮೩ ರಲ್ಲಿ ೪೧೨ ಕೋಟಿ. ರೂ. ಗಳಷ್ಟಾಗುವ ನಿರ್ಯಾತದ ನಿರೀಕ್ಷೆಯಿದೆ.

ಸ್ವದೇಶಿ ಯಂತ್ರ ಸರಂಜಾಮುಗಳನ್ನು ಬಳಸಿಕೊಂಡು ದೇಶೀಯ ನೈಪುಣ್ಯತೆಯನ್ನು ಬಳಸಿಕೊಂಡು ಇತರ ಕೈಗಾರಿಕೆಗಳಿಗೆ ಅಗತ್ಯವಿರುವ ವಿದೇಶಿ ಯಂತ್ರಗಳನ್ನು ಕೊಂಡುಕೊಳ್ಳಲು

ಅಗತ್ಯವಿರುವ ವಿದೇಶಿ ವಿನಿಮಯ ಗಳಿಸಿಕೊಡುವ ಈ ಉದ್ಯಮದ ಮಹತ್ವವನ್ನು ಎಷ್ಟು ಬಣ್ಣಿಸಿದರೂ ಕಡಿಮೆಯೇ.

ಕೈಮಗ್ಗ ಉದ್ಯಮವು ಗ್ರಾಮೋದ್ಧಾರದ ಯಾವುದೇ ಕಾರ್ಯಕ್ರಮದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನಾಡುವದರಿಂದ ಈ ಕೈಗಾರಿಕೆಯ ವಿಸ್ತೃತ ಪ್ರಗತಿಗೆ ಗಾಂಧೀವಾದಿಗಳು ಅವಿಶ್ರಾಂತ ಹೋರಾಡುತ್ತಿರುವದು ಆದರಣೀಯ ಸಂಗತಿಯಾಗಿದೆ. "ಭಾರತದ ಮೋಕ್ಷ ನೇಕಾರಿಕೆಯ ಉದ್ಯಮದ ಅಭಿವೃದ್ಧಿಯಲ್ಲಿ ಅಡಗಿದೆ"ಎಂಬ ರಾಷ್ಟ್ರಪಿತನ ಮಾತು ಸ್ಮತ್ಯವಾಗಿದೆ.

೪. ನೇಕಾರಿಕೆ ಉದ್ಯಮದ ಸಮಸ್ಯೆಗಳು

"After all, true art can only be expressed not through inanimate power-driven machinery designed for mass production but only through the delicate living touch of the hands of man & women"

—Young India : March 14, 1929

ಬಹು ಸಂಖ್ಯಾ ಜನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡುವ ಖಾದಿ ಮತ್ತು ಕೈಮಗ್ಗ ಉದ್ಯಮವನ್ನು ಅಭಿವೃದ್ಧಿ ಪಡಿಸುವದು ಸಮರ್ಥನೀಯ. ರಾಷ್ಟ್ರದಾದ್ಯಂತ ಹಬ್ಬಿಕೊಂಡಿರುವ ಕೈಮಗ್ಗ ಉದ್ಯಮಗಳು ಆಯಾ ಪ್ರಾದೇಶಿಕ ವಲಯ

ಗಳಿಗನುಗುಣವಾಗಿ ಈ ಕೈಗಾರಿಕೆಗಳು ಎದುರಿಸುತ್ತಿರುವ ಸಮಸ್ಯೆಗಳು ಕೆಳಗಿನಂತಿವೆ.

(೧) ಸಂಘಟನಾ ಸಮಸ್ಯೆ :

ನೇಕಾರಿಕೆಯು ಪ್ರಾಚೀನಕಾಲದಿಂದಲೂ ವ್ಯವಸ್ಥಿತ ಕ್ರಮವಾಗಿ ಸಂಘಟಿಸಲ್ಪಟ್ಟಿಲ್ಲವೆಂಬುದು ವಿವಾದಸೀಯ ಸಂಗತಿ. ನೇಕಾರರು ಸ್ವತಂತ್ರವಾಗಿ ಉದ್ದಿಮೆ ಚಟುವಟಿಕೆಯನ್ನು ಕೈಕೊಂಡು ಜೀವನ ನಿರ್ವಹಿಸುತ್ತಿದ್ದಾರೆ. ಆಗಾಗ ಮಾರುಕಟ್ಟೆಯ ಸ್ಥಿತ್ಯಂತರಗಳಿಂದಾಗಿ ಇವರ ಆರ್ಥಿಕ ಜೀವನಮಟ್ಟ ಹೆಚ್ಚು ಕಡಿಮೆಯಾಗುತ್ತಿರುತ್ತದೆ. ಅಸಂಘಟಿತ ಈ ಉದ್ಯಮದಲ್ಲಿ ನೇಕಾರರ ಜೀವನ ಸ್ಥಿತಿ ತೀರಾ ಚಿಂತಾಜನಕ.

ನೇಕಾರರನ್ನು ಸಂಘಟಿಸಿ ಅವರನ್ನು ಸಹಕಾರಿ ಕ್ಷೇತ್ರಕ್ಕೆ ಒಳಪಡಿಸುವ ಪ್ರಯತ್ನಗಳು ೧೯೦೪ ರ ನಂತರ ನಡೆದವು. ಆದರೆ ನೇಕಾರರ ಸಹಕಾರಿ ಸಂಘಗಳ ಅಯಶಸ್ಸಿನಿಂದಾಗಿ ಮಧ್ಯಸ್ಥಿಕೆ ವ್ಯಾಪಾರಸ್ಥರ ವರ್ಗವೊಂದು ಉದಯಿಸಿ, ನೇಕಾರರು ಶ್ರೀಮಂತ ನೇಕಾರರ ಕೈಯಲ್ಲಿ ಶೋಷಿತವಾಗತೊಡಗಿದರು. ಪ್ರಸ್ತುತದಲ್ಲಿ ಸಹಕಾರಿ ಕ್ಷೇತ್ರಕ್ಕೆ ಒಳಪಟ್ಟ ನೇಕಾರರ ಸಂಖ್ಯೆ ಸುಮಾರು ೫೦–೬೦ ಲಕ್ಷಗಳಷ್ಟಿರುವದು. ಇವರಲ್ಲಿ ಶೇಕಡಾ ೩೦ ರಷ್ಟು ನೇಕಾರರು ಮಾತ್ರ ಕಾರ್ಯಾಸಕ್ತರಾಗಿರುವರು. ೧೯೬೫-೬೬ ರಲ್ಲಿ ನೇಕಾರರ ಸಹಕಾರಿ ಸಂಘಗಳಲ್ಲಿ ನೋಂದಣಿಯಾದ ಕೈಮಗ್ಗಗಳ ಸಂಖ್ಯೆ ೯.೩೨ ಲಕ್ಷಗಳಷ್ಟಿದ್ದರೆ, ೧೯೭೮ ಮಾರ್ಚ್ ೩೧ ರಂದು ಅವುಗಳ ಸಂಖ್ಯೆ ಕೇವಲ ೧೨.೫೫ ಲಕ್ಷಗಳಷ್ಟಾಯಿತು.

ನೇಕಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಗಮನಿಸಿ ಸರಕಾರವು ೧೯೪೭ ರಲ್ಲಿ **"ಫ್ಯಾಕ್ಟ್ ಫಾಯಿಂಡಿಂಗ್ ಸಮಿತಿ"** ಯು ಶಿಫಾರಸಿನ ಮೇರೆಗೆ ಮೊಟ್ಟ ಮೊದಲು **"ಅಖಿಲ ಭಾರತ ನೇಕಾರರ ಕೈಮಗ್ಗ ಮಂಡಳಿ"** ಯನ್ನು ಸ್ಥಾಪಿಸಿತು. ಪರಿಣಾಮಕಾರಿಯಾದ ರೀತಿಯಲ್ಲಿ ನೇಕಾರಿಕೆಯನ್ನು ಸಂಘಟಿಸಲು ಸರಕಾರವು ೧೯೫೨ ರಲ್ಲಿ "ಅಖಿಲ ಭಾರತ ಕೈಮಗ್ಗದ ಬೋರ್ಡ" ನ್ನು ಸ್ಥಾಪಿಸಿತು. ಈ ಉದ್ದಿಮೆಯ ಸರ್ವತೋಮುಖ ಏಳ್ಗೆಗಾಗಿ **"ಡೆವಲಪ್‌ಮೆಂಟ ಕಮೀಷನರ್"** ಅವರು ಎಲ್ಲ ವಿಧದ ಸೌಲಭ್ಯಗಳನ್ನು ಪೂರೈಸುವ ಹೊಣೆಗಾರಿಕೆಯುಳ್ಳವರಾಗಿದ್ದಾರೆ. ಕೇಂದ್ರ ಸರಕಾರವು ಆಗಷ್ಟ ೭, ೧೯೭೮ ರಲ್ಲಿ ಘೋಷಿಸಿದ ಹೊಸ ಜವಳಿ ನೀತಿಯನ್ವಯ **"ಅಖಿಲ ಭಾರತ ಕೈಮಗ್ಗದ ಬೋರ್ಡ"**ನ್ನು ಡಿಸೆಂಬರ ೨೨, ೧೯೭೮ ರಂದು ಪುನರ್ಘಟಿಸಿ ಕೈಮಗ್ಗಗಳ ಸಮಸ್ಯೆಯನ್ನು ಬಗೆಹರಿಸಲು ಕಂಕಣಬದ್ಧವಾಗಿ ನಿಂತಿತು.

(೨) ಮಾರಾಟದ ಸಮಸ್ಯೆ :

ಕೈಮಗ್ಗದ ಉದ್ದಿಮೆ ರಂಗ ಉತ್ಪಾದಿಸಿದ ಸರಕುಗಳನ್ನು ಮಾರಾಟ ಮಾಡುವದು ಜ್ವಲಂತ ಸಮಸ್ಯೆ. ಉತ್ಪಾದನೆಯು ತೃಪ್ತಿಕರವಾಗಿ ಅಧಿಕಗೊಳ್ಳುತ್ತಿದ್ದರೂ, ಮಾರಾಟದ ವಿಸ್ತೃತ ಸಮಸ್ಯೆಗಳು ಉಲ್ಬಣಗೊಳ್ಳುತ್ತಿವೆ. ಮಾರಾಟ ಮಾಡುವ ತೊಂದರೆಯಿಂದಾಗಿ ಸಹಕಾರಿ ಸಂಘಗಳು ತೃಪ್ತಿಕರವಾಗಿ ಕಾರ್ಯ ಮಾಡುತ್ತಿಲ್ಲ. ನೇಕಾರರು ಸ್ವತಂತ್ರವಾಗಿ ಉದ್ಯೋಗ ಮಾಡುವದು ಕಷ್ಟವಾಗಿದೆ.

ದೇಶದ ಒಟ್ಟು ಬಟ್ಟೆಯ ಬೇಡಿಕೆಯನ್ನು ಜವಳಿ ರಂಗವು ಪೂರೈಕೆ ಮಾಡಲು ಅಸಮರ್ಥವಿದ್ದಾಗ್ಯೂ. ಹಳೆಯ ವಿಧಾನವನ್ನು ಅನುಸರಿಸಿ ನೇಯ್ಗೆ ಚಟುವಟಿಕೆ ಕೈಕೊಳ್ಳುವ ಕೈಮಗ್ಗ ಉದ್ದಿಮೆಯು ಸಾಕಷ್ಟು ಉತ್ಪಾದನೆ ಮಾಡುವ ಸಾಧ್ಯತೆಯುಂಟು. ಆದರೆ ಪ್ರಸ್ತುತ ಗಿರಣಿ ರಂಗ ಮತ್ತು ಪಾವರಲೂಮು ಮಗ್ಗಗಳೊಂದಿಗೆ ಪೈಪೋಟಿ ನಡೆಸಿ ತನ್ನ ಅಸ್ತಿತ್ವವನ್ನು ಕಾಯ್ದುಕೊಳ್ಳಬೇಕಾಗಿದೆ. ನೇಕಾರಿಕೆ ಉದ್ಯಮವು ಮಾರಾಟವನ್ನು ತೀವ್ರಗೊಳಿಸಲು. ಅದು ಮೊದಲು ಆತಂಕಗಳ ನೈಜ ಸಂಗತಿಗಳನ್ನು ಗೊತ್ತು ಹಚ್ಚಿ, ಆಧುನಿಕತೆಯ ಕಡೆಗೆ ಓಡುತ್ತಿರುವ ಸಮಾಜಕ್ಕೆ ಅನುಕೂಲವಾಗವಂತೆ ಕೈಮಗ್ಗ ಉದ್ಯಮವನ್ನು ಪುನರ್ಘಟಿಸುವದು ಮತ್ತು ಮಾರಾಟ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವದು ಅಗತ್ಯ.

೧೯೭೭ ರ ಜವಳಿ ನೀತಿಯು ಅಧಿಕಗೊಳ್ಳುತ್ತಿರುವ ಬೇಡಿಕೆಯನ್ನು ಪೂರೈಸಲು ಉತ್ಪಾದನೆಯನ್ನು ಹೆಚ್ಚಿಸುವ ಕಾರ್ಯಕ್ರಮ ಕೈಗೊಂಡಿದೆ. ಇದರಿಂದಾಗಿ ಉತ್ಪಾದನೆಯು ೩೬೦೦ ದ.ಲ. ಮೀಟರುಗಳಿಂದ ೩೭೦೦ ದ.ಲ.ಮೀ.ಗಳಿಗೆ ಹೆಚ್ಚುವ ನಿರೀಕ್ಷೆಯಿದೆ. ಮಾರಾಟ ಕ್ರಮವನ್ನು ವ್ಯವಸ್ಥೆಗೊಳಿಸಬೇಕಾಗಿರುವದು ಸರಕಾರ ಮತ್ತು ನೇಕಾರರ ಹೊಣೆಗಾರಿಕೆಯಾಗಿದೆ. ಸದ್ಯದಲ್ಲಿ ಕೈಮಗ್ಗ ರಂಗವು ಕೆಳಗಿನ ಕಾರಣಗಳಿಂದಾಗಿ ಮಾರಾಟದ ಸಮಸ್ಯೆಯನ್ನು ಎದುರಿಸುತ್ತಿದ್ದು ಅವುಗಳನ್ನು ನಿವಾರಿಸಬಹುದುದಾಗಿದೆ.

(೧) ಆರ್ಥಿಕ ಯೋಜನೆಗಳಲ್ಲಿ ನೆಹರೂ ವಾದಕ್ಕೆ ಅಧಿಕ ಪುರಸ್ಕಾರ ದೊರೆತು, ಬೃಹತ್ ಪ್ರಮಾಣದ ಕೈಗಾರಿಕೋದ್ಯಮ

ಗಳಿಗೆ ಸಾಕಷ್ಟು ಅವಕಾಶ ದೊರೆತಂತಾಗಿ, ಗ್ರಾಮೀಣ ಕೈಗಾರಿಕೆಯಾದ ನೇಕಾರಿಕೆಯನ್ನು ನಿರ್ಲಕ್ಷಿಸಲಾಯಿತು.

(೨) ಬದಲಾಗುತ್ತಿರುವ ಸಮಾಜದಲ್ಲಿ ಗ್ರಾಹಕರ ಅಭಿರುಚಿಗಳು ಬದಲಾಗುತ್ತಿರುವದು ಗಮನಾರ್ಹ. ಗ್ರಾಹಕರ ಅಭಿರುಚಿ ಮತ್ತು ಫ್ಯಾಷನುಗಳಿಗೆ ಅನುಗುಣವಾಗಿ ಸರಕುಗಳನ್ನು ನೇಕಾರರು ಉತ್ಪಾದಿಸುತ್ತಿಲ್ಲ.

(೩) ನೇಕಾರರು ಹಳೆಯ ವಿಧಾನವನ್ನು ಬಿಟ್ಟು ಹೊಸ ತಂತ್ರಜ್ಞಾನ ಮತ್ತು ಹೊಸ ಹೊಸ ಡಿಜೈನುಗಳನ್ನು ಅಳವಡಿಸಿಕೊಳ್ಳುತ್ತಿಲ್ಲ.

(೪) ಮೋಸದ ಸಹಕಾರಿ ಸಂಘಗಳ ಸಂಖ್ಯೆ ಹೆಚ್ಚುತ್ತಿರುವದರಿಂದ ಅವುಗಳ ಮೇಲೆ ನೇಕಾರರ ವಿಶ್ವಾಸ ಕುದುರುತ್ತಿಲ್ಲ.

(೫) ನೂಲಿನ ಬೆಲೆ ಏರುತ್ತಿರುವದರಿಂದ ಕೈಮಗ್ಗ ಬಟ್ಟೆಯ ಬೆಲೆ ಹೆಚ್ಚುವದರಿಂದ ಬೇಡಿಕೆ ಕಡಿಮೆಯಾಗುತ್ತಿದೆ.

(೬) ನೈಲಾನ್, ಟೆರಿಕಾಟ್ ಮತ್ತು ಟೆರಿಲಿನ್ ಮುಂತಾದ ರಾಸಾಯನಿಕ ಬಟ್ಟೆಗಳಿಗೆ ಅಧಿಕ ಬೇಡಿಕೆಯಿರುವದರಿಂದಾಗಿ ಹತ್ತಿ ಬಟ್ಟೆಗಳ ಬೇಡಿಕೆಯು ತ್ವರಿತಗತಿಯಿಂದ ಇಳಿಮುಖವಾಗುತ್ತಿದೆ.

ಮೇಲಿನ ಎಲ್ಲ ಸಮಸ್ಯೆಗಳು ತಾತ್ಕಾಲಿಕವಾದವುಗಳು. ಅವುಗಳನ್ನು ಯೋಜಿತ ಜವಳಿ ನೀತಿಯಿಂದ ಸುಲಭವಾಗಿ ಬಗೆಹರಿಸಬಹುದು.

(೩) ಕಚ್ಚಾ ನೂಲಿನ ಅಭಾವ :

ಪ್ರಥಮ ಜಾಗತಿಕ ಯುದ್ಧಾನಂತರ ರಫ್ತು ವ್ಯಾಪಾರ

ಕುಸಿಯಿತು. ಗಿರಣಿವಲಯವು ದೇಶೀಯ ಮಾರುಕಟ್ಟೆಗಳನ್ನು ಸುಲಭವಾಗಿ ವಶಪಡಿಸಿಕೊಂಡಿತು. ಇದರಿಂದಾಗಿ ನೇಕಾರಿಕೆ ಉದ್ಯಮವು ನೂಲಿನ ಕೊರತೆಯಿಂದಾಗಿ ಬಳಲತೊಡಗಿತು. ೧೯೧೬—೧೯೨೧ ರಲ್ಲಿ ಗಿರಣಿ ರಂಗದ ನೂಲಿನ ಬಳಕೆಯು ವಾರ್ಷಿಕ ಸರಾಸರಿ ೩೩೨.೮ ದ. ಲ. ಪೌಂಡುಗಳಿಗೆ ಹೆಚ್ಚಿದರೆ ಕೈಮಗ್ಗ ರಂಗದ ನೂಲಿನ ಬಳಕೆಯು ೨೧೯.೪ ದ. ಲಕ್ಷ ಪೌಂಡು ಗಳಿಗೆ ಇಳಿಮುಖವಾಯಿತು.

ಇತ್ತೀಚಿಗೆ ಸರಕಾರವು ನೂಲಿನ ಕೊರತೆಯನ್ನು ನೀಗಿಸಲು ಪಾವರಲೂಮ ರಂಗ ಬಳಸುತ್ತಿರುವ ನೂಲಿನ ಮೇಲೆ ಅತ್ಯಧಿಕ ಸುಂಕ ವಿಧಿಸಿದರೂ, ಕೈಮಗ್ಗಗಳಿಗೆ ಮೀಸಲಾಗಿರಿಸಿರುವ ಲಡಿಗಳ ರೂಪದಲ್ಲಿರುವ ನೂಲನ್ನು ಕೋನು ಮತ್ತು ರೀಲುಗಳ ರೂಪ ದಲ್ಲಿ ಪರಿವರ್ತಿಸುವ ಪ್ರವೃತ್ತಿಯು ಉತ್ಪಾದಕರಲ್ಲಿ ಕಂಡುಬರು ತ್ತಿದೆ. ೧೯೭೪–೭೯ ರಲ್ಲಿ ಕೈಮಗ್ಗ ಬಟ್ಟೆಯ ಉತ್ಪಾದನಾ ಗುರಿಯು ೩೦೦೦ ದ.ಲಕ್ಷ ಮೀಟರುಗಳಷ್ಟಿರುವದನ್ನು ನೋಡಿ ದಾಗ, ಅದಕ್ಕೆ ಕನಿಷ್ಠ ಪಕ್ಷ ೩೦೦. ದ.ಲಕ್ಷ ಕಿ·ಗ್ರಾಂ. ಗಳಷ್ಟು ನೂಲನ್ನು ಒದಗಿಸುವದು ಅತ್ಯಗತ್ಯ ಎಂದು ಕಂಡುಬಂದಿತು. ನೂಲಿನ ಉತ್ಪಾದನೆಯನ್ನು ಹೆಚ್ಚಿಸಲು **"ರಾಷ್ಟ್ರೀಯ ಸಹಕಾರ ಅಭಿವೃದ್ಧಿ ಕಾರ್ಪೊರೇಷನ್"** ವು ಪ್ರತಿಯೊಂದು ಗಿರಣಿಯು ೨೫,೦೦೦ ಕದಿರುಗಳ ಸಾಮರ್ಥ್ಯವನ್ನು ಹೊಂದಿರುವ ೩೮ ಹೊಸ ಗಿರಣಿಗಳನ್ನು ಸ್ಥಾಪಿಸುವಂತೆ ಯೋಜಿಸಿದ್ದು ಸ್ವಾಗತಾರ್ಹ. ಅಲ್ಲದೆ ೧೮ ಸಹಕಾರಿ ನೂಲಿನ ಗಿರಣಿಗಳ

ಕದಿರುಗಳ ಸಂಖ್ಯೆಯನ್ನು ೨.೨೫ ಲಕ್ಷ ಕದಿರುಗಳಿಂದ ಹೆಚ್ಚಿಸುವ ಅವಕಾಶ ನೀಡಿದೆ.

ಸದ್ಯದಲ್ಲಿ ವರ್ಷದ ೨೫೦ ದಿನಗಳ ಕಾರ್ಯ ನಿರ್ವಹಣೆಯ ಅಂದಾಜಿನ ಮೇರೆಗೆ ಪ್ರತಿಯೊಂದು ಕೈಮಗ್ಗವು ಪ್ರತಿದಿನ ೫ ಮೀಟರುಗಳ ಬಟ್ಟೆಯನ್ನು ಉತ್ಪಾದಿಸಲು ಅರ್ಧ ಕಿ. ಗ್ರಾಂ. ನೂಲು ಬೇಕಾಗುತ್ತದೆ. ಈ ಲೆಕ್ಕಾಚಾರದ ಮೇಲಿಂದ ದೇಶದಲ್ಲಿರುವ ೩೭.೪೧ ಲಕ್ಷ ಕೈಮಗ್ಗಗಳಿಗೆ ಒಂದು ವರ್ಷಕ್ಕೆ ಸುಮಾರು ೪೭೦ ದ. ಲಕ್ಷ ಕಿ. ಗ್ರಾಂ. ಗಳಷ್ಟು ನೂಲನ್ನು ಪೂರೈಸುವದು ಅತ್ಯಗತ್ಯ. ಅಗತ್ಯವಿರುವ ನೂಲನ್ನು ಪೂರೈಸಲು ನೂಲಿನ ಗಿರಣಿಗಳ ಸಂಖ್ಯೆಯನ್ನು ಅಧಿಕಗೊಳಿಸಬೇಕೇ ಹೊರತು ಇತರ ರಂಗಗಳು ಬಳಸುವ ನೂಲಿನ ಮೇಲೆ ಅಧಿಕ ಸುಂಕ ವಿಧಿಸುವದು ಇಲ್ಲವೆ ನೂಲಿನ ಬಳಕೆಯನ್ನು ಸೀಮಿತಗೊಳಿಸುವದು ಸರಕಾರದ ಅಸಮರ್ಪಕ ಧೋರಣೆಯಾಗಿದೆ.

(೪) ಹಣಕಾಸಿನ ಕೊರತೆ :

"ನೇಕಾರನ ಹೆಂಡತಿ ಬೆತ್ತಲೆ" ಎಂಬ ನಾಣ್ಣುಡಿಯು ನೇಕಾರರ ದಾರುಣ ಸ್ಥಿತಿಯನ್ನು ವಿವರಿಸದಿರಲಾರದು. ಪ್ರಸಕ್ತ ಹಳೆಯ ಪದ್ಧತಿಯನ್ನು ತ್ಯಜಿಸಿ ಆಧುನಿಕ ರೀತಿಯ ಉತ್ಪಾದನೆಯನ್ನು ಕೈಕೊಳ್ಳಲು ಪತ್ತಿನ ಸೌಲಭ್ಯ ಅಗತ್ಯ. ಅಸಂಘಟಿತ ಈ ಉದ್ಯಮಕ್ಕೆ ವಾಣಿಜ್ಯ ಬ್ಯಾಂಕುಗಳು ಹಣಕಾಸಿನ ಸೌಲಭ್ಯವನ್ನು ನೀಡಲು ಹಿಂಜರಿಯುತ್ತವೆ. ನೇಕಾರರ ಸಹಕಾರ ಸಂಘಗಳು ನಿಯೋಜಿತವಾಗಿ ಕಾರ್ಯ ನಿರ್ವಹಿಸದಿರುವವರಿಂದ ನೇಕಾರರು ಹಣಕಾಸಿನ ತೊಂದರೆಯಿಂದ ಬಳಲುತ್ತಲಿದ್ದಾರೆ. ತತ್ಪರಿಣಾಮ

ವಾಗಿ ಮಧ್ಯಸ್ಥಿಕೆ ವ್ಯಾಪಾರಸ್ಥರ ಕಪಿಮುಷ್ಠಿಯಲ್ಲಿ ಶೋಷಣೆಗೊಳ್ಳುತ್ತಿರುವದು ಸಹಜ.

ದೇಶದಲ್ಲಿ ಪ್ರಧಾನಪಾತ್ರ ವಹಿಸುತ್ತಿದ್ದ ಈ ಉದ್ಯಮಕ್ಕೆ ಯೋಜನಾಕಾರರು ನೀಡಿದ ಮೊತ್ತದ ವಿವರವನ್ನು ಕೆಳಗಿನ ಪಟ್ಟಿಯಿಂದ ಕಂಡುಕೊಳ್ಳಬಹುದಾಗಿದೆ.

ಕೈಮಗ್ಗ ಉದ್ದಿಮೆಗೆ ವಿನಿಯೋಗವಾದ ವೆಚ್ಚ:

ಯೋಜನೆ	ಕೋಟಿ ರೂ. ಗಳು		ಗುಡಿ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳ ವೆಚ್ಚದಲ್ಲಿ ಶೇಕಡಾ ಪ್ರಮಾಣ
ಪ್ರಥಮ ಯೋಜನೆ	೧೧.೧		೨೬.೪
ದ್ವಿತೀಯ ಯೋಜನೆ	೨೯.೭		೧೫.೯
ತೃತೀಯ ಯೋಜನೆ	೨೫.೪		೧೦.೫
ವಾರ್ಷಿಕ ಯೋಜನೆಗಳು	೧೦.೦		೧೦.೩
ಚತುರ್ಥ ಯೋಜನೆ	೨೯.೦		೧೧.೯
ಐದನೆಯ ಯೋಜನೆ	೮೦.೬		೧೫.೮
ಆರನೆಯ ಯೋಜನೆ (೧೯೭೮-೮೩)	೨೮೦.೦	(ಅಂದಾಜು)	೧೯.೯

ಪ್ರಸ್ತುತದಲ್ಲಿ ಕೈಮಗ್ಗ ಉದ್ದಿಮೆಗೆ ಅಗತ್ಯವಿರುವ ಒಟ್ಟು ಹಣಕಾಸಿನಲ್ಲಿ ಶೇಕಡಾ ೧೦ ರಷ್ಟನ್ನು ಮಾತ್ರ ಸಹಕಾರಿ ಸಂಸ್ಥೆಗಳು ಮತ್ತು ವಾಣಿಜ್ಯ ಬ್ಯಾಂಕುಗಳು ಪೂರೈಸುತ್ತಿವೆ. ೧೯೭೭-೭೮

ರಲ್ಲಿ "ಅಂದಾಜು ಸಮಿತಿ"ಯನ್ವಯ ಪ್ರತಿವರ್ಷ ನೇಕಾರರಿಗೆ ಅಗತ್ಯವಿರುವ ಬಂಡವಾಳದ ಪ್ರಮಾಣ ೩೦೦ ಕೋಟಿ. ರೂ. ಗಳಷ್ಟು. ಇದರಲ್ಲಿ ೨೫ ಕೋಟಿ. ರೂ. ಗಳನ್ನು ಮಾತ್ರ ವಾಣಿಜ್ಯ ಬ್ಯಾಂಕುಗಳಂತಹ ಸಂಘಟಿತ ಸಂಸ್ಥೆಗಳಿಂದ ಒದಗಿಸಲಾಗುತ್ತಿದೆ.

ದೇಶದಲ್ಲಿರುವ ಎಲ್ಲ ಮಗ್ಗಗಳನ್ನು ಪುನರ್ಘಟಿಸಲು ೧೫೦ ಕೋಟಿ. ರೂ.ಗಳ ಅಗತ್ಯ ಎಂದು ಇನ್ನೊಂದು ವರದಿಯಿಂದ ವಿದಿತ. ಅಲ್ಲದೆ "ಅಧ್ಯಯನ ಸಮಿತಿ" ಯ ವರದಿಯ ಪ್ರಕಾರ ಕೈಮಗ್ಗಗಳಿಗೆ ಈಗ ದೊರಕುವ ಹಣಕಾಸು ತೀರಾ ಕಡಿಮೆ ಎಂದು ಅಭಿಪ್ರಾಯ ಪಡಲಾಗಿದೆ. ಅದಲ್ಲದೆ ಬ್ಯಾಂಕುಗಳಿಂದ ಈಗ ದೊರೆಯುವ ೪೨ ಕೋಟಿ. ರೂ. ಗಳ ಪತ್ತಿನ ಸೌಲಭ್ಯವನ್ನು ೧೯೮೦-೮೧ ರಲ್ಲಿ ೨೧೮ ಕೋಟಿ. ರೂ.ಗಳಿಗೆ ಹೆಚ್ಚಿಸುವಂತೆ ಶಿಫಾರಸು ಮಾಡಿತ್ತು.

ಮೇಲಿನ ಎಲ್ಲ ವಿವರಗಳಿಂದ ನೇಕಾರರಿಗೆ ದೊರಕುವ ಪತ್ತಿನ ಸೌಕರ್ಯ ತೀರ ಕಡಿಮೆಯೆಂದು ಸ್ಪಷ್ಟಗೊಳ್ಳುತ್ತದೆ.

(೫) "ಉದಾಸೀನ ಮನೋಭಾವನೆ"

ಪ್ರಾಮಾಣಿಕತೆ, ದಕ್ಷತೆ, ಸತತ ಪರಿಶ್ರಮ, ಸೇವಾ ಮನೋಭಾವನೆ, ಉದಾತ್ತ ಮಹತ್ವಾಕಾಂಕ್ಷೆ, ಮುಂಧೋರಣೆ-ಮುಂತಾದ ಗುಣಗಳ ಕೊರತೆಯನ್ನು ನೇಕಾರರಲ್ಲಿ ಕಾಣಬಹುದಾಗಿದೆ. ಬದಲಾಗುತ್ತಿರುವ ಸಮಾಜಕ್ಕೆ ನೇಕಾರರು ಹೊಂದಿಕೊಳ್ಳದಿರುವದು ಪ್ರಗತಿಗೆ ದೊಡ್ಡ ಆತಂಕವಾಗಿದೆ. ಅಲ್ಲದೆ ಆಡಳಿತ ರಂಗದಲ್ಲಿ ಭ್ರಷ್ಟಾಚಾರ, ಅಪ್ರಾಮಾಣಿಕತೆ ಮತ್ತು

ಅದಕ್ಷತೆ ಮುಂತಾದ ಲೋಪದೋಷಗಳು ಭೂತಾಕಾರವಾಗಿ ಬೆಳೆದಿರುವದಕ್ಕೆ ನೇಕಾರರ ಪರೋಕ್ಷ ಸಮ್ಮತಿಯೇ ಕಾರಣವಾಗಿದೆ. ಸಮಾಜದಲ್ಲಿಯ ಕೆಲವು ಗೋಮುಖ ವ್ಯಾಘ್ರರಾದ ಜನರು ನೇಕಾರರ ಸಹಕಾರ ಸಂಘಗಳನ್ನು ಸ್ಥಾಪಿಸಿಕೊಂಡು, ಸರಕಾರದಿಂದ ಬರುವ ಸಹಾಯಧನ ಮತ್ತು ಇತರ ಸೌಲಭ್ಯಗಳನ್ನು ಸ್ವಹಿತ ಸಾಧನೆಗೆ ಬಳಸಿಕೊಳ್ಳುತ್ತಿರುವರು. ಇಂಥ ಸಂಸ್ಥೆಗಳು ನಾಯಿಕೊಡೆಗಳಂತೆ ಹುಟ್ಟಿಕೊಂಡು ಸಹಕಾರ ತತ್ವಗಳನ್ನು ಗಾಳಿಗೆ ತೂರುತ್ತಿವೆ. ತತ್ಪರಿಣಾಮವಾಗಿ ಪ್ರಾಮಾಣಿಕ ಸಹಕಾರಿ ಸಂಸ್ಥೆಗಳ ಮೇಲೆ ಕೆಲವು ಸಲ ನೇಕಾರರ ವಿಶ್ವಾಸ ಕುದುರದೆ ಇರುವದರಿಂದ ಅವುಗಳ ವೈಫಲ್ಯಕ್ಕೆ ಕಾರಣವಾಗುತ್ತದೆ.

ಕೈಮಗ್ಗ ಅಭಿವೃದ್ಧಿ ಕೇವಲ ಆರ್ಥಿಕ ಕಾರ್ಯಕ್ರಮಗಳನ್ನಷ್ಟೇ ಅವಲಂಬಿಸಿರುವದಿಲ್ಲ. ಅದು ಆಡಳಿತ ನಿರ್ವಹಣೆಯ ದಕ್ಷ ಅಧಿಕಾರಿಗಳ ಪ್ರಾಮಾಣಿಕತೆಯನ್ನು ಮತ್ತು ನೇಕಾರರ ಸಹಕಾರ ಮನೋಭಾವನೆಯನ್ನು ಅವಲಂಬಿಸಿರುತ್ತದೆ.

೫. ನೇಕಾರಿಕೋದ್ಯಮ ಮತ್ತು ಸರಕಾರ

ಪ್ರಪಂಚದಲ್ಲಿ ಮಹಾ ಆರ್ಥಿಕ ಮುಗ್ಗಟ್ಟು ಸಂಭವಿಸಿದ ನಂತರ ಭಾರತ ಆರ್ಥಿಕ ಸ್ಥಿತಿಯು ಚೇತನಹೀನವಾಗದಿರಲಿಲ್ಲ. ವರಮಾನದ ಇಳಿಮುಖದಿಂದಾಗಿ ಕೈಮಗ್ಗ ವಸ್ತ್ರಗಳ ಬೇಡಿಕೆಯು ಕಡಿಮೆಯಾಗಿ ಈ ಉದ್ಯಮವು ಕಠಿಣ ಪ್ರಸಂಗವನ್ನೆದುರಿಸಬೇಕಾಯಿತು ಅದೇ ಕಾಲಕ್ಕೆ "ಬ್ಯಾಂಕಿಂಗ್ ವಿಚಾರಣಾ ಸಮಿತಿ"ಯು

ಸಲಹೆಗಳನ್ನಯು ಸರಕಾರವು ಅಮುದು ಮಾಡಿಕೊಳ್ಳುವ ೧ ಪೌಂಡು ನೂಲಿನ ಮೇಲೆ ೧ ಪೈಸೆಯಂತೆ ಅಬಕಾರಿ ಸುಂಕ ವಿಧಿಸಿ ಬರುವ ಹಣವನ್ನು ಕೈಮಗ್ಗ ಅಭಿವೃದ್ಧಿಗೆ ಕೊಡಬೇಕೆಂದು ನಿರ್ಣಯಿಸಿತು. ಅದರಂತೆಯೇ ೧೯೫೪ ರಲ್ಲಿ ಗಿರಣಿ ರಂಗದ ಸ್ಪರ್ಧೆಯಿಂದ ಕೈ ಮಗ್ಗ ಉದ್ಯಮವನ್ನು ರಕ್ಷಿಸಲು ಸರಕಾರವು ಸೀರೆ ಮತ್ತು ಧೋತರಗಳ ಉತ್ಪಾದನೆಯನ್ನು ಗಿರಣಿ ರಂಗವು ಉತ್ಪಾದಿಸದಂತೆ ನಿಷೇಧಿಸಿತು.

ನೇಕಾರರ ಉತ್ತರೋತ್ತರ ಅಭಿವೃದ್ಧಿಗಾಗಿ ೧೯೫೨ ಅಕ್ಟೋಬರ ೨೫ ರಂದು ಕೇಂದ್ರ ಸರಕಾರವು "ಅಖಿಲ ಭಾರತ ಕೈಮಗ್ಗದ ಬೋರ್ಡ" ವೊಂದನ್ನು ಸ್ಥಾಪಿಸಿತು. ಈ ಬೋರ್ಡಿನ ಸ್ಥಾಯಿ ಸಮಿತಿ (Standing Committee)ಯು ಕೆಳಗಿನ ಸಲಹೆಗಳನ್ನು ಶಿಫಾರಸು ಮಾಡಿತು.

(೧) ನೂಲಿನ ಗಿರಣಿಗಳಲ್ಲಿರುವ ಒಟ್ಟು ಕದಿರುಗಳ ಪೈಕಿ ೨೫ ಲಕ್ಷ ಕದಿರುಗಳಿಂದ ಉತ್ಪಾದಿತವಾಗುವ ನೂಲನ್ನು ಕೈಮಗ್ಗ ಉದ್ದಿಮೆಗೆ ತೆಗೆದಿರಿಸಬೇಕು.

(೨) ೩೦ ದಶ ಲಕ್ಷ ರೂ.ಗಳ ಪ್ರತ್ಯೇಕ ನಿಧಿಯನ್ನು ಏರ್ಪಡಿಸಿ ನೇಕಾರರಿಗೆ ಅಗತ್ಯವಿರುವ ಸಾಲದ ಸೌಲಭ್ಯಗಳನ್ನು ಸಹಕಾರಿ ಸಂಘಗಳ ಮೂಲಕ ಒದಗಿಸಬೇಕು.

(೩) ಕೈಮಗ್ಗ ಬಟ್ಟೆಗಳ ಮಾರಾಟವನ್ನು ಸುವ್ಯವಸ್ಥಿತ ಗೊಳಿಸಬೇಕು.

ಸರಕಾರ ಕೈಮಗ್ಗ ನಿಧಿಯನ್ನು ಹೆಚ್ಚಿಸಲು ೧೯೬೦ ರಲ್ಲಿ "ಸೆಸ್ ಫಂಡ್" ನ್ನು ಸ್ಥಾಪಿಸಿತು. ಇವನ್ನು ಕೈಮಗ್ಗ ಅಭಿವೃದ್ಧಿ

ಚಟುವಟಿಕೆಗಳಿಗೆ ಬಳಸಲಾಯಿತು. "ಅಖಿಲ ಭಾರತ ಕೈಮಗ್ಗ ಬೋರ್ಡ" ದ ಸಲಹೆಯನ್ವಯ ಸರಕಾರವು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ಸಾಮಾನ್ಯ ನಿಯಮಗಳನ್ವಯ ಹಣಕಾಸಿನ ಸೌಕರ್ಯಗಳನ್ನು ಒದಗಿಸಲಾಯಿತು. ಹಣಕಾಸಿನ ಸೌಲಭ್ಯದಲ್ಲಿ ಪ್ರತಿಯೊಂದು ರಾಜ್ಯದ ಪಾಲನ್ನು ಪ್ರತಿ ವರ್ಷ ಆಯಾ ರಾಜ್ಯಗಳು ಉತ್ಪಾದಿಸಿದ ನೂಲಿನ ಪ್ರಮಾಣದ ಮೇಲೆ ನಿಗದಿಪಡಿಸಲಾಗುತ್ತಿತ್ತು. ೧೯೫೮ ರಲ್ಲಿ ಈ ಪದ್ಧತಿಯನ್ನು ತ್ಯಜಿಸಿ, ರಾಜ್ಯ ಸರಕಾರಗಳಿಗೆ "ವೇಜ ಆ್ಯಂಡ ಮೀನ್ಸ್" ಸಾಲದ ಸೌಲಭ್ಯವನ್ನು ಒದಗಿಸಲಾಯಿತು. ಇದರಿಂದಾಗಿ ಕೈಮಗ್ಗ ಬೋರ್ಡ ಹಣಕಾಸು ಸಲಹೆ ನೀಡುವಲ್ಲಿ ತನ್ನ ಪ್ರಾಮುಖ್ಯತೆ ಕಳೆದುಕೊಂಡಿತು. ರಿಝರ್ವ ಬ್ಯಾಂಕು ತನ್ನ ವಿಶೇಷ ಯೋಜನೆಯನ್ವಯ ನೇಕಾರರ ಸಹಕಾರಿ ಸಂಘಗಳಿಗೆ ಚಾಲ್ತಿ ಬಂಡವಾಳವನ್ನು ಒದಗಿಸತೊಡಗಿತು. ರಾಜ್ಯ ಅಪೆಕ್ಸ್ ಸಹಕಾರಿ ಸಂಘಗಳು ರಿಝರ್ವ ಬ್ಯಾಂಕಿನಿಂದ ಪಡೆದ ಹಣಕಾಸಿನ ಸೌಲಭ್ಯವನ್ನು ಕೆಳಗಿನ ಪಟ್ಟಿಯಿಂದ ಕಂಡುಕೊಳ್ಳಬಹುದಾಗಿದೆ.

ರಿಝರ್ವ ಬ್ಯಾಂಕಿನಿಂದ ಪಡೆದ ಸಹಾಯ

ವರ್ಷ	ಸಹಾಯ ಧನ (ಲಕ್ಷ ರೂ.ಗಳಲ್ಲಿ)
೧೯೫೭–೫೮	೧೮೦.೧೯
೧೯೫೮–೫೯	೨೨೭.೨೭
೧೯೫೯–೬೦	೨೩೨.೯೨
೧೯೬೦–೬೧	೨೯೫.೪೭

೧೯೬೧-೬೨	೩೬೮.೮೭
೧೯೬೨-೬೩	೫೧೮.೩೪
೧೯೬೩-೬೪	೫೧೬.೦೩
೧೯೭೦-೭೧	೧೦೧೨.೩೭
೧೯೭೧-೭೨	೧೨೭೬.೧೬
೧೯೭೩-೭೪	೧೩೯೯.೩೨

ಅನೇಕ ತಜ್ಞ ಸಮಿತಿಗಳು ಕೈಮಗ್ಗ ಬಟ್ಟೆಯನ್ನು ಪುರಸ್ಕಾರಗೊಳಿಸಲು "ರಿಬೇಟ" ಯೋಜನೆಯನ್ನು ಕಾರ್ಯಗತ ಗೊಳಿಸಬೇಕೆಂದು ಅಭಿಪ್ರಾಯಪಟ್ಟವು. ಇದನ್ನು ಮನ್ನಿಸಿ ರಿಬೇಟ ಯೋಜನೆಯನ್ನು ೧೯೫೪ ರಲ್ಲಿ ಕಾರ್ಯರೂಪಕ್ಕಿಳಿಸಲಾಯಿತು. ೧೯೫೪-೧೯೫೭ ರ ವರೆಗೆ ೧ ರೂ.ಗೆ ೧.೫ ಆಣೆಯಂತೆ ರಿಬೇಟನ್ನು ಕೊಡಲಾಯಿತು. ಮುಂದೆ ಇದನ್ನು ೧೯೫೮ ರಲ್ಲಿ ಅರ್ಧ ಆಣೆಗೆ ಇಳಿಸಲಾಯಿತು. ಇವುಗಳಲ್ಲದೆ ವರ್ಷದ ವಿವಿಧ ಋತುಮಾನ. ಹಬ್ಬ-ಹರಿದಿನ ಸಂಭ್ರಮಗಳಲ್ಲಿ ತಾತ್ಕಾಲಿಕ ರಿಬೇಟನ್ನು ಕೊಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಉದ್ಯಮಕ್ಕೆ ಅಗತ್ಯವಿರುವ ನೂಲನ್ನು ಪೂರೈಸುವ ಸಲುವಾಗಿ "ಟೆಕ್ಸ್‌ಟಾಯಿಲ್ ಕಮಿಷನರ್" ಅವರು ಲಡಿಗಳ ರೂಪದಲ್ಲಿ ನೂಲನ್ನು ಉತ್ಪಾದಿಸುವಂತೆ ಆಜ್ಞೆ ವಿಧಿಸಿರುತ್ತಾರೆ. ಪ್ರತಿವರ್ಷ ಕೈಮಗ್ಗ ಉದ್ಯಮಕ್ಕೆ ಅಗತ್ಯವಿರುವ ೩೦೦ ದಶಲಕ್ಷ ಕಿ.ಗ್ರಾಂ.ಗಳಷ್ಟು ನೂಲನ್ನು ಲಡಿಗಳ ರೂಪದಲ್ಲಿ ಪೂರೈಸುವಂತೆ ಗಿರಣಿಗಳ ಮೇಲೆ ನಿಬಂಧನೆಯನ್ನು ಹೇರಲಾಗಿದೆ. ನೂಲಿನ

ಪೂರೈಕೆಗಾಗಿ "ರಾಷ್ಟ್ರೀಯ ಸಹಕಾರ ಅಭಿವೃದ್ಧಿ ಕಾರ್ಪೊರೇಷನ್"ವು ಪ್ರತಿಯೊಂದು ಗಿರಣಿಯು ೨೫,೦೦೦ ಕದಿರುಗಳ ಸಾಮರ್ಥ್ಯವನ್ನು ಹೊಂದಿರುವ ೨೫ ನೂಲಿನ ಗಿರಣಿಗಳನ್ನು ಸ್ಥಾಪಿಸುವಂತೆ ಯೋಜಿಸಿದೆ.

ಪಾವರಲೂಮು ರಂಗದಿಂದ ಕೈಮಗ್ಗ ವಲಯವನ್ನು ರಕ್ಷಿಸಲು ಸರಕಾರವು ೧೯೭೬ ರಲ್ಲಿ ಕೈಮಗ್ಗಗಳನ್ನು ಪಾವರಲೂಮುಗಳಿಗೆ ಪರಿವರ್ತಿಸುವ ಕಾರ್ಯಕ್ರಮವನ್ನು ಬಿಟ್ಟುಕೊಟ್ಟಿತು. ೧೯೭೮ ರಲ್ಲಿ ಎಲ್ಲ ಪಾವರಲೂಮುಗಳನ್ನು ಸುಂಕದ ಕಕ್ಷೆಯಲ್ಲಿ ಬರುವಂತೆ ಮಾಡಲಾಯಿತು. ಕೈ ಮಗ್ಗಕ್ಕೆ ಮೀಸಲಾದ ಬಡಿಗಳ ರೂಪದಲ್ಲಿರುವ ನೂಲನ್ನು ಕೋನು ಮತ್ತು ರೀಲುಗಳ ರೂಪದಲ್ಲಿ ಪರಿವರ್ತಿಸದಂತೆ ಕಟ್ಟಳೆಯನ್ನು ವಿಧಿಸಲಾಯಿತು. ಕೈಮಗ್ಗ ಬಟ್ಟೆಯನ್ನು ಪಾವರಲೂಮು ಬಟ್ಟೆಯಿಂದ ಪ್ರತ್ಯೇಕಿಸಲು "ಟ್ರೇಡ್ ಮಾರ್ಕ" ಗುರ್ತನು ಪಾವರಲೂಮು ಬಟ್ಟೆ ಹೊಂದಿರುವಂತೆ ಮಾಡಲಾಯಿತು. ಪಾವರಲೂಮು ಯುನಿಟ್ಟುಗಳ ಮೇಲೆ ಸಂಯುಕ್ತ ತೆರಿಗೆಯನ್ನು ಹೆಚ್ಚಿಸಿ, ಸಂಗ್ರಹವಾಗುವ ಹಣವನ್ನು ಕೈಮಗ್ಗಕ್ಕೆ ಖರ್ಚು ಮಾಡಲಾಗುತ್ತಿದೆ. ೧೯೭೩ ರ ತಜ್ಞ ಸಮಿತಿಯ ಸಲಹೆಗಳನ್ನು ಅಂಗೀಕರಿಸಿದಲ್ಲಿ ಪ್ಯಾವರಲೂಮು ಸೆಸ್. ಸಂಯುಕ್ತ ತೆರಿಗೆ ಮತ್ತು ಸಂಸ್ಕರಣ ಸುಂಕದಿಂದಾಗಿ ಪ್ರತಿ ವರ್ಷ ೩೦ ಕೋಟಿ.ರೂ ಗಳನ್ನು ಹೆಚ್ಚಿನ ನಿಧಿಯನ್ನು ಪಡೆದು ಐದನೆಯ ಯೋಜನೆಯಲ್ಲಿ ಕೈಮಗ್ಗ ಉದ್ಯಮಗಳ ವಿಸ್ತೃತ ಪ್ರಗತಿಯನ್ನು ಆಶಿಸಲಾಗಿತ್ತು.

ಪಾವರಲೂಮು ಬಟ್ಟೆಗಳಿಗೆ ಕೈಮಗ್ಗ ಬಟ್ಟೆಯೆಂದು ಗುರ್ತುಹಾಕಿ ಪಾವರಲೂಮು ರಂಗವು ಮಾರುಕಟ್ಟೆಯನ್ನು ಕಬಳಿಸುತ್ತದೆ. ಇದನ್ನು ತಪ್ಪಿಸಲು ೧೯೫೦ ರಲ್ಲಿ ಟೆಕ್ಸ್‌ಟಾಯಿಲ್ ಕಮೀಷನರ್ ಅವರು ಕ್ರಮಗಳನ್ನು ಕೈಕೊಂಡರೂ, ಆಡಳಿತದ ಶಿಥಿಲತೆಯಿಂದಾಗಿ ಸಮಸ್ಯೆಯು ಉಲ್ಬಣ ಸ್ಥಿತಿಗೇರಿದೆ. ಈಗ **"ಶಿವರಾಮನ್ ಸಮಿತಿಯು"** ಸಲಹೆಗಳ ಮೇರೆಗೆ ಬಣ್ಣದ ಸೀರೆಗಳನ್ನು ಕೈಮಗ್ಗ ರಂಗಕ್ಕೆ ಮೀಸಲಾಗಿಡುವ ಕಾರ್ಯಕ್ರಮವು ಜಾರಿಗೊಂಡಿದೆ. ಅಲ್ಲದೆ ವಿವಿಧ ಪ್ರಾದೇಶಿಕ ವಲಯಗಳಲ್ಲಿ ಕೇಂದ್ರೀಕೃತಗೊಂಡಿರುವ ಕೈಮಗ್ಗ ಕೇಂದ್ರಗಳಲ್ಲಿ **"ತೀವ್ರ ಅಭಿವೃದ್ಧಿ ಪ್ರೊಜೆಕ್ಟ್"** ಗಳನ್ನು ಕೈಕೊಳ್ಳಲಾಗುತ್ತಿದೆ. ಪ್ರಥಮ ಬಾರಿಗೆ ಇಂಥ ಪ್ರೊಜೆಕ್ಟ್‌ವೊಂದು ೧೯೭೫ ಅಕ್ಟೋಬರ ೨ ರಂದು **"ಬಸಹಟ್ಟಿ"** (ವಿಜಾಪುರ ಜಿಲ್ಲೆ) ಯಲ್ಲಿ ಸ್ಥಾಪಿತವಾಯಿತು. ಈ ಪ್ರೊಜೆಕ್ಟ್‌ವು ನೇಕಾರರಿಗೆ ಅಗತ್ಯವಿರುವ ಎಲ್ಲ ಸೌಲಭ್ಯಗಳನ್ನು ಒದಗಿಸಿ, ಅವರ ಜೀವನ ಮಟ್ಟವನ್ನು ಹೆಚ್ಚಿಸುವಲ್ಲಿ ನಿರತವಾಗಿವೆ.

ಆರ್ಥಿಕ ಯೋಜನೆಗಳಲ್ಲಿ ಕೈಮಗ್ಗ ಉದ್ಯಮಕ್ಕಾಗಿ ಕೊಡಮಾಡಿದ ಹಣಕಾಸಿನ ಸೌಲಭ್ಯದ ವಿವರಗಳನ್ನು ಕೆಳಗಿನ ಪಟ್ಟಿಯಿಂದ ನಿರೀಕ್ಷಿಸಬಹುದು.

ಯೋಜನೆ	ಮಂಜೂರಾದ ವೆಚ್ಚ (ಕೋಟಿ) ರೂ.ಗಳಲ್ಲಿ	ವಾಸ್ತವಿಕ ವೆಚ್ಚ (ಕೋಟಿ. ರೂ. ಗಳಲ್ಲಿ)
ಪ್ರಥಮ ಯೋಜನೆ	—	೧೧.೧
ದ್ವಿತೀಯ ಯೋಜನೆ	೫೯.೫	೩೧.೭

ತೃತೀಯ ಯೋಜನೆ	೩೫.೦	೨೬.೯
ವಾರ್ಷಿಕ ಯೋಜನೆ	——	೧೪.೧
ಚತುರ್ಥ ಯೋಜನೆ	೩೫.೩	೨೯.೨
ಐದನೆಯ ಪಂಚವಾರ್ಷಿಕ ಯೋಜನೆ(೧೯೭೪ ೭೮)	೧೯.೯೨	೫೦.೩
೧೯೭೮–೧೯೮೧	೩೦೮.೦	——

ಆರ್ಥಿಕ ಯೋಜನೆಗಳಲ್ಲಿ ಉದ್ಯಮದ ವಿಸ್ತೃತ ಪ್ರಗತಿಗಾಗಿ ಮೇಲಿನಂತೆ ಬಂಡವಾಳ ವಿನಿಯೋಗಿಸಿ ಹಮ್ಮಿಕೊಂಡ ಗುರಿ ಮತ್ತು ಸಾಧಿಸಿದ ಗುರಿಗಳ ವಿವರವನ್ನು ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

ಕೈಮಗ್ಗ ಉದ್ಯಮದ ಉತ್ಪಾದನಾ ಗುರಿ ಮತ್ತು ಸಾಧನೆ
(ದ. ಲ. ಮೀಟರುಗಳಲ್ಲಿ)

ಯೋಜನೆ	ವಾರ್ಷಿಕ ಉತ್ಪಾದನಾ ಗುರಿ	ವಾಸ್ತವಿಕ ಉತ್ಪಾದನೆ
ಪ್ರಥಮ ಯೋಜನೆ	೧೭೦೦	೧೪೫೦
ದ್ವಿತೀಯ ಯೋಜನೆ	೨೧೦೦	೨೧೦೦
ತೃತೀಯ ಯೋಜನೆ	೨೮೦೦	೨೫೦೦
ಚತುರ್ಥ ಯೋಜನೆ	೩೦೦೦	೨೧೦೦
ಐದನೆಯ ಯೋಜನೆ	೩೦೦೦	೨೩೦೦
ಆರನೆಯ ಯೋಜನೆ (೧೯೭೮–೮೩)	೩೭೦೦	೨೪೫೦ (೧೯೭೯–೮೦)

ಕೇಂದ್ರ ಸರಕಾರವು ೧೯೭೬ ಫೆಬ್ರುವರಿಯಲ್ಲಿ ಎಲ್ಲ ರಾಜ್ಯಗಳ ಕೈಮಗ್ಗ ಕೈಗಾರಿಕೆಯ ಸಚಿವರನ್ನೊಳಗೊಂಡ "ಕೈಮಗ್ಗ ಸಮ್ಮೇಳನ"ವನ್ನು ಕರೆಯಿತು. ಈ ಸಮ್ಮೇಳನದಲ್ಲಿ ಕೈಮಗ್ಗ ಉದ್ಯಮವು ಎದುರಿಸುತ್ತಿರುವ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರೋಪಾಯಗಳನ್ನು ಕಂಡುಕೊಂಡಿತು. ೧೯೭೬ ಏಪ್ರಿಲ್ ೧ ರಿಂದ ಮುಂದಿನ ೫ ವರ್ಷಗಳಲ್ಲಿ ಉದ್ದಿಮೆಗಾಗಿ ಸುಮಾರು ೩೦೮ ಕೋಟಿ ರೂ.ಗಳನ್ನು ಖರ್ಚು ಮಾಡುವ ಗುರಿಯಿಟ್ಟುಕೊಂಡಿತು. ಈ ಬಂಡವಾಳದ ಸಹಾಯದಿಂದ ೧೩ ತೀವ್ರ ಅಭಿವೃದ್ಧಿ ಯೋಜನೆಗಳನ್ನು ಮತ್ತು ೨೦ ನಿರ್ಯಾತ ಸರಕುಗಳ ಉತ್ಪಾದನಾ ಪ್ರೊಜೆಕ್ಟ್ ಸ್ಥಾಪಿಸುವಂತೆ ಯೋಜಿಸಲಾಯಿತು. ಪ್ರತಿಯೊಂದು ತೀವ್ರ ಯೋಜನೆಯ ವೆಚ್ಚ ೧.೮೫ ಕೋಟಿ.ರೂ ಗಳಷ್ಟು ಹಾಗೂ ಪ್ರತಿಯೊಂದು ನಿರ್ಯಾತ ಪ್ರೊಜೆಕ್ಟಿದ ಖರ್ಚು ೪೦ ಲಕ್ಷ ರೂ.ಗಳಷ್ಟಾಗಬಹುದೆಂದು ಅಂದಾಜು ಮಾಡಲಾಗಿದೆ.

ಕೈಮಗ್ಗ ಉದ್ಯಮದ ಪ್ರೋತ್ಸಾಹಕ್ಕಾಗಿ ಗಿರಣಿ ಬಟ್ಟೆ ಮತ್ತು ಪಾವರಲೂಮ ಬಟ್ಟೆಗಳ ಮೇಲೆ ಕೆಲವು ನಿರ್ಬಂಧನೆಗಳನ್ನು ವಿಧಿಸಿ ಕೇಂದ್ರ ಸರಕಾರವು ಶಿವರಾಮನ್ ಸಮಿತಿಯ ಶಿಫಾರಸುಗಳನ್ನು ಅಂಗೀಕರಿಸಿದೆ. ಕೈಮಗ್ಗ ಉದ್ದಿಮೆಯನ್ನು ಪುನಶ್ಚೇತನಗೊಳಿಸಲು ಕೇಂದ್ರ ಸರಕಾರವು ೧೯೭೮ ಅಗಷ್ಟ ೭ ರಂದು ಹೊಸ ಜವಳಿ ನೀತಿಯೊಂದನ್ನು ಘೋಷಿಸಿತು. ಹೊಸ ನೀತಿಯನ್ವಯ ಕೈಮಗ್ಗ ಬಟ್ಟೆಯ ಉತ್ಪಾದನೆಯನ್ನು ೨೩೦೦ ದ.ಲ.ಮೀ.ಗಳಿಂದ ೩೭೦೦ ದ.ಲ.ಮೀ.ಗಳಿಗೆ ಹೆಚ್ಚಿಸುವ ಗುರಿಯಿಟ್ಟುಕೊಳ್ಳಲಾಯಿತು.

ಕೈಮಗ್ಗ ತೀವ್ರ ಅಭಿವೃದ್ಧಿ ಯೋಜನೆಯನ್ನಾಯು (Hand-loom Intensive Project) ೧೯೭೮-೭೯ ರಲ್ಲಿ ಹೊಸದಾಗಿ ನಾಲ್ಕು ಪ್ರೊಜೆಕ್ಟ್‌ಗಳನ್ನು ಪ್ರಾರಂಭಿಸಲಾಯಿತು. ಇದರಿಂದಾಗಿ ದೇಶದಲ್ಲಿ ೨೫ ಪ್ರೊಜೆಕ್ಟ್‌ಗಳ ಸ್ಥಾಪನೆಯಾದಂತಾಯಿತು. ಪ್ರತಿ ಪ್ರೊಜೆಕ್ಟ್‌ವು ಸುಮಾರು ೧೦,೦೦೦ ಮಗ್ಗಗಳನ್ನೊಳಗೊಂಡಿರುವದು. ಅಲ್ಲದೆ ಪ್ರತಿ ೧೦೦೦ ಮಗ್ಗಗಳನ್ನೊಳಗೊಂಡ ನಿಯಾತ ಪ್ರೊಜೆಕ್ಟ್‌ಗಳ ಸಂಖ್ಯೆ ೨೧ ಕ್ಕೆ ಹೆಚ್ಚಿತು.

೧೯೭೬ ರಲ್ಲಿ ಪ್ರಾರಂಭಿಸಲಾದ ಜನತಾ ಬಟ್ಟೆಯ ಉತ್ಪಾದನೆಯ ಯೋಜನೆಯನ್ವಯ (Janata Cloth Scheme) ಕೈಮಗ್ಗಗಳಿಗೆ ಅಧಿಕ ಚಾಲನೆಯನ್ನು ನೀಡಲಾಯಿತು. ೧೯೭೮ ಮಾರ್ಚ ತಿಂಗಳೊಳಗಾಗಿ ೧೦೦ ದ.ಲ.ಮೀಟರುಗಳ ಗುರಿಯಿದ್ದಾಗ, ಕೈಮಗ್ಗ ರಂಗವು ೮೨ ದ.ಲ.ಮೀಟರುಗಳ ಉತ್ಪಾದನೆಯನ್ನು ಸಾಧಿಸಿತು. ಪ್ರಸ್ತುತದಲ್ಲಿ ೧೯೭೯ ಮಾರ್ಚದಲ್ಲಿ ಜನತಾ ಬಟ್ಟೆಯ ಉತ್ಪಾದನಾ ಗುರಿಯನ್ನು ೨೦೦ ದ.ಲ.ಮೀಟರುಗಳಿಗೆ ಮತ್ತು ೧೯೮೩ ರಲ್ಲಿ ೫೦೦ ದ.ಲ.ಮೀ.ಗಳಿಗೆ ಸಾಧಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಜನತಾ ಬಟ್ಟೆಯ ಯೋಜನೆಯಿಂದಾಗಿ ೪ ಲಕ್ಷ ನೇಕಾರರು ೧ ಲಕ್ಷ ಕೈಮಗ್ಗಗಳಲ್ಲಿ ನಿರತರಾಗುವ ನಿರೀಕ್ಷೆಯಿದೆ.

ಜನತಾ ಬಟ್ಟೆಯನ್ನು ಉತ್ಪಾದಿಸಲು ಕೇಂದ್ರ ಸರಕಾರವು ವಿವಿಧ ರಾಜ್ಯಗಳಿಗೆ ೧೯೭೬-೭೭ ರಲ್ಲಿ ೧೫೭ ಲಕ್ಷ ರೂ.ಗಳನ್ನು ಮತ್ತು ೧೯೭೭-೭೮ ರಲ್ಲಿ ೭೪ ಲಕ್ಷ ರೂ.ಗಳ ಸಹಾಯಧನವನ್ನು ಒದಗಿಸಿತು.

ತಜ್ಞ ಸಮಿತಿಯ ಸಲಹೆಗಳ ಪ್ರಕಾರ ಸಹಕಾರಿ ಕ್ಷೇತ್ರದ ಕಕ್ಷೆಯಲ್ಲಿ ೪೪೩೬ ಹೊಸ ಕೈಮಗ್ಗಗಳನ್ನು ಒಳಪಡಿಸಲಾಯಿತು. ಅಂದರೆ ೧೯೭೮ ಮಾರ್ಚ ೩೧ ರಂದು ಒಟ್ಟು ೧೨.೫೫ ಲಕ್ಷ ಕೈಮಗ್ಗಗಳನ್ನು ನೇಕಾರರ ಸಹಕಾರಿ ಸಂಘಗಳ ಆಡಳಿತಕ್ಕೆ ಒಳಪಡಿಸಲಾಯಿತು. ಅಲ್ಲದೆ ಇದೇ ಕಾಲದಲ್ಲಿ ೨೨೫೪ ಹೊಸ ನೇಕಾರರ ಸಹಕಾರ ಸಂಘಗಳನ್ನು ಸ್ಥಾಪಿಸಲಾಯಿತು.

ಕೇಂದ್ರ ಸರಕಾರವು ಕೈಮಗ್ಗ ಉದ್ಯಮವನ್ನು ಪೈಪೋಟಿಯಿಂದ ರಕ್ಷಿಸಲು ಪ್ರಕಟನೆಯೊಂದರ ಮೂಲಕ ಈ ಕೆಳಗಿನ ಹತ್ತು ನಮೂನೆಯ ಉತ್ಪಾದನೆಗಳನ್ನು ಕೈಮಗ್ಗದ ಕ್ಷೇತ್ರಕ್ಕೆ ಮೀಸಲಾಗಿರಿಸಿತು.

೧) ಬಣ್ಣದ ಸೀರೆಗಳು ಮತ್ತು ಪ್ರಕಟಣೆಯಲ್ಲಿ ತಿಳಿಸಿದಂತೆ ಬಾರ್ಡರ ನಿಬಂಧನೆಯ ಸೀರೆಗಳು.
೨) ಬಣ್ಣದ ಅಂಚಿನ ಧೋತರಗಳು
೩) ಹಿಂಜಿದ ಬಟ್ಟೆ
೪) ಧೂಳೊರಸುವ ಬಟ್ಟೆ
೫) ಟಾವೆಲ್ಲುಗಳು ಮತ್ತು ಜಿನುಗಾದ ನೇಯ್ಗೆಯಿರುವ ಟಾವೆಲ್ಲುಗಳು
೬) ಲುಂಗಿಗಳು
೭) ಹಲವು ವಿಧದ ಚಾದರುಗಳು, ಬೆಡ್‌ಶೀಟುಗಳು ಮತ್ತು ಬೆಡ್ ಕವರುಗಳು
೮) ಟೇಬಲ್ ಕ್ಲಾಥ ಮತ್ತು ಹತ್ತಿ ಬಟ್ಟೆಗಳು ಇತ್ಯಾದಿ
೯) ಪ್ಲೇನ್ ವ್ಹೀವ್ ಕ್ಲಾಥ
೧೦) ಕರವಸ್ತ್ರಗಳು ಮತ್ತು ಮಶ್ರು ಕ್ಲಾಥ ಇತ್ಯಾದಿ

ಶಿವರಾಮನ್ ಸಮಿತಿಯು ಸಲಹೆಗಳು ಸ್ವಾಗತಾರ್ಹವಾಗಿದ್ದರೂ, ಅವುಗಳಲ್ಲಿರುವ ನ್ಯೂನತೆಗಳನ್ನು ಕೇಂದ್ರ ಸರಕಾರದ "ಅಂದಾಜು ಸಮಿತಿ"ಯು ತನ್ನ ೧೪ ನೆಯ ಮತ್ತು ೨೪ ನೆಯ ವರದಿಗಳಲ್ಲಿ ಪ್ರಚುರಪಡಿಸಿತು. ಈ ವರದಿಯಲ್ಲಿರುವ ಸಲಹೆಗಳು ಕಾರ್ಯಾನುಷ್ಠಾನಕ್ಕೆ ಅರ್ಹವಾದವುಗಳು. ಸರಕಾರವು ಅಂಗೀಕರಿಸಿ, ದಲ್ಲಿ ಉದ್ದಿಮೆಯ ಅಭಿವೃದ್ಧಿಯಲ್ಲಿ ಇನ್ನೊಂದು ದಿಟ್ಟ ಹೆಜ್ಜೆಯಾಗಬಹುದಾಗಿದೆ.

ಇತ್ತೀಚೆಗೆ ಡಾ॥ ಚರಣಜಿತ ಚನಾನಾ, ಕೇಂದ್ರ ಕೈಗಾರಿಕಾ ಸಚಿವರು ಪಾರ್ಲಿಮೆಂಟಿನಲ್ಲಿ ಕೈಮಗ್ಗ ಉದ್ದಿಮೆಯ ಉತ್ತರೋತ್ತರ ಪ್ರಗತಿಗಾಗಿ ರಾಷ್ಟ್ರೀಯ ಮಟ್ಟದಲ್ಲಿ "**ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ಕಾರ್ಪೊರೇಷನ್**" ವೊಂದನ್ನು ಸ್ಥಾಪಿಸುವದಾಗಿ **ಹೇ**ಳಿಕೆ ನೀಡಿದುದು ಅರ್ಹ ಸಂಗತಿಯಾಗಿದೆ.

ಸ್ವಾತಂತ್ರ್ಯದ ಇತ್ತೀಚಿಗಿನ ಅವಧಿಯಲ್ಲಿ ಉದ್ದಿಮೆಯ ಯೋಜಿತ ಬೆಳವಣಿಗೆಗೆ ಸರಕಾರವು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾಗ್ಯೂ, ಅವುಗಳನ್ನು ಅರೆಮನಸ್ಸಿನಿಂದ ಅನುಷ್ಠಾನಗೊಳಿಸುತ್ತಿರುವದರಿಂದ ನಿರೀಕ್ಷಿತ ಫಲವನ್ನು ಸಾಧಿಸಲಾಗಲಿಲ್ಲ. ಕುಂಟುತ್ತಿರುವ ನೇಕಾರಿಕೆ ಉದ್ಯಮಕ್ಕೆ ಕಾಯಕಲ್ಪ ಅಗತ್ಯ. ಸಾರ್ವಜನಿಕರ ಸಹಕಾರ ಈ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕಿಳಿಸಲು ಅತ್ಯಗತ್ಯ ಎಂದು ಒತ್ತಿ ಹೇಳಬೇಕಾಗಿಲ್ಲ.

೬. ಉಪಸಂಹಾರ

"There is no lack of plans and schemes in our country, what we really lack is honesty of purpose. Most of us continue to dabble in matters about which we know nothing and really want to do nothing. We lack the crusader's spirit which our country badly needs to-day".

—Chaman Lal

ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿರುವ ಈ ಉದ್ದಿಮೆ ಯನ್ನು ಅಭಿವೃದ್ಧಿ ಪಡಿಸಲು ಸರಕಾರವು ಕೈಕೊಳ್ಳುವ ಕಾರ್ಯ ಕ್ರಮಗಳಿಗೆ ತೊಂದರೆ ಇರದಿದ್ದರೂ, ಆ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವಲ್ಲಿ ಧೈರ್ಯಕ್ಕೆ ಮಾತ್ರ ಕೊರತೆ ಇದೆ. ಸರಕಾರವು ಭಾವನಾತ್ಮಕವಾಗಿ ಕಾರ್ಯಕ್ರಮಗಳನ್ನು ಕೈಕೊಂಡು ಅವುಗಳನ್ನು ಅರೆಮನಸ್ಸಿನಿಂದ ಕಾರ್ಯಗತಗೊಳಿಸುತ್ತಿರುವದು ವಿಷಾದನೀಯ ಸಂಗತಿಯಾಗಿದೆ.

ಗಾಂಧಿ ವಾದ ಮತ್ತು ನೆಹರೂ ವಾದಗಳ ಘರ್ಷಣೆಯಿಂದಾಗಿ ಅಧಿಕಾರ ಲಾಲಸೆಯುಳ್ಳ ರಾಜಕಾರಣಿಗಳು ಈ ಉದ್ಯಮದ ಪ್ರಗತಿಗೆ ಪ್ರಾಮಾಣಿಕ ಪ್ರಯತ್ನ ನಡೆಸದಿರುವದು ದುರ್ದೈವದ ಸಂಗತಿ. ಗಾಂಧೀಜಿಯವರ ತತ್ವಗಳಿಂದ ಪ್ರಭಾವಿತರಾದ ಜನರು ಗ್ರಾಮೀಣ ಮತ್ತು ಗುಡಿ ಕೈಗಾರಿಕೆಗಳಿಗೆ ಅಧಿಕ ಪ್ರಾಶಸ್ತ್ಯ ನೀಡು ವಂತೆ ಒತ್ತಾಯ ಪಡಿಸುತ್ತಿದ್ದರೆ, ನೆಹರೂ ಅವರ ಅನುಯಾಯಿ

ಗಳು ಉತ್ಪಾದನೆಯನ್ನು ಅಧಿಕಗೊಳಿಸಲು ಭಾರಿ ಪ್ರಮಾಣದ ಕೈಗಾರಿಕೋದ್ಯಮಗಳ ಅಭಿವೃದ್ಧಿಗೆ ಪ್ರಾಶಸ್ತ್ಯವಿತ್ತರು. ಈ ಎರಡೂ ಸೈದ್ಧಾಂತಿಕ ವಿವೇಚನೆಗಳನ್ನು ನಮ್ಮ ದೇಶದ ಇಬ್ಬರೂ ಮಹಾನ್ ನಾಯಕರ ಸ್ಪಷ್ಟ ಅಭಿಪ್ರಾಯಗಳಿಂದ ಕಂಡು ಕೊಳ್ಳಬಹುದಾಗಿದೆ.

Let not reader run away with the idea hat I abuse machinery because it is machinery. Vhat is resisted is the usurpation by machinery of the function of man and his consequent lavery to it"

—Mahatma Gandhi

"What I object to is the craze for machi ery, not machinery as such. The craze is for hat they call labour-saving machinery. Men go n 'Saving labour' till the thousands are without ork and thrown on the open streets to die of arvation".

—Mahatma Gandhi (young india)

೧೯೫೯ ಸಪ್ಟೆಂಬರ ೨೮ ರಂದು ಚಂದಿಗಡದಲ್ಲಿ ಸಮಾವೇಶ ಗೊಂಡ ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ನೆಹರೂ ಅವರು, ಭವಿಷ್ಯತ್ತಿನ ಭಾರತವನ್ನು ಮುನ್ನಡೆಸುವ ಬಗ್ಗೆ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅವರ ಅಭಿಪ್ರಾಯ

ಗಳಿಂದ ಗ್ರಾಮೀಣ ಮತ್ತು ಗುಡಿಕೈಗಾರಿಕೆಗಳಿಗಿರುವ ಮನೋ
ಭಾವನೆಯನ್ನು ಕೆಳಗಿನ ಉಲ್ಲೇಖದಿಂದ ಕಂಡುಕೊಳ್ಳಬಹುದಾಗಿದೆ

"The primary thing about an Integrated plan was production and not employment. Employment was important but it was utterly unimportant in the context of production. It followed production and not preceded production. And production would only go up by better techniques which mean modern methods"

—Pt.J.Nehru(AICC–ಚಂಡಿಗಡ, ೨೮–೯–೫೯

ಕಳೆದ ಮೂವತ್ತು ವರ್ಷಗಳಲ್ಲಿ ಆರ್ಥಿಕ ಯೋಜನೆಗಳ
ವಾದಗಳ ಪುರಸ್ಕಾರಕ್ಕೆ ಆದ್ಯತೆ ನೀಡಲಾಗುತ್ತಿದೆಯೇ ಹೊರತು
ಅವುಗಳೆರಡನ್ನು ಸಮನ್ವಯಗೊಳಿಸಿ ಪ್ರಾಮಾಣಿಕ ಪ್ರಯತ್
ಗಳಿಂದ ಉದ್ದಿಮೆಗಳನ್ನು ಅಭಿವೃದ್ಧಿಗೊಳಿಸದಿರುವದು ದುರದೃಷ
ಕರ ಸಂಗತಿಯಾಗಿದೆ. ರಾಜಕೀಯ ಮುಖಂಡರು ತಮ್ಮ ಅಪ
ಕಾಲದಲ್ಲಿ ಗಾಂಧೀಜಿ ಅವರ ತತ್ವ ಪ್ರಣಾಳಿಕೆಯನ್ನು ಪ್ರ
ಪಡಿಸುತ್ತ, ಕೈಗಾರಿಕೀಕರಣಕ್ಕೆ ಪ್ರಾಶಸ್ತ್ಯವನ್ನಿತ್ತರು. ಇನ
ಕೆಲವರು ಕಾಲಕ್ಕನುಗುಣವಾಗಿ ಬದಲಾವಣೆ ಹೊಂದುತ್ತ, ಒಮ
ಕೈಗಾರಿಕೀಕರಣದತ್ತ ಇನ್ನೊಮ್ಮೆ ಗ್ರಾಮೀಣ ಪುನರ್ರಚನ
ಕಾರ್ಯಕ್ರಮಗಳತ್ತ ಉಯ್ಯಾಲೆಯಾಡಹತ್ತಿದರು. ಇದರಿಂದ
ಅರೆಮನಸ್ಸಿನ ಧೋರಣೆಗಳು ಹೊರಹೊಮ್ಮಿದನಂತರ ಯಾವ
ವಿಧವಾದ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಕೊಳ್ಳಲಾಗಲಿ

ಭಾರತೀಯರ ಜನಜೀವನದಲ್ಲಿ ಹಾಸುಹೊಕ್ಕಾಗಿ ಬೆಳೆದು ಬಂದಿರುವ ಬಹು ಪುರಾತನ ಕೈಗಾರಿಕೆಗಳಲ್ಲೊಂದಾದ ನೇಕಾರಿಕೆ ಉದ್ದಿಮೆಯನ್ನು ಸಂರಕ್ಷಿಸುವದು ಹಾಗೂ ಅಭಿವೃದ್ಧಿಪಡಿಸುವುದು ಆರ್ಥಿಕ ಮತ್ತು ಸಾಮಾಜಿಕ ದೃಷ್ಟಿಗಳಿಂದ ಸಮರ್ಥನೀಯ. ನೇಕಾರಿಕೆ ಉದ್ದಿಮೆ ಕಡಿಮೆ ಬಂಡವಾಳದಿಂದ ಹೆಚ್ಚಿನ ಉತ್ಪಾದನೆ ಮತ್ತು ಅಧಿಕ ಉದ್ಯೋಗಾವಕಾಶಗಳನ್ನು ಕಲ್ಪಿಸುತ್ತಿವೆಯೆಂಬುದು ನಿರ್ವಿವಾದ. ಆದರೆ ಈ ಉದ್ದಿಮೆಯು ಇನ್ನೂ ಅನೇಕ ಜ್ವಲಂತ ಸಮಸ್ಯೆಗಳಿಗೆ ಗುರಿಯಾಗಿದೆ. ಈ ಎಲ್ಲ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡು ಹಿಡಿದು ಅದನ್ನು ಕಾಯಕಲ್ಪಗೊಳಿಸುವದು ಸರಕಾರದ ಆದ್ಯ ಕರ್ತವ್ಯ.

---

kup wd 777 5,000 30-10-1982

ಉಪನ್ಯಾಸ ಗ್ರಂಥಮಾಲೆಯ ಇತ್ತೀಚಿನ ಪ್ರಕಟನೆಗಳು

೧ ಸಾಂಸರ್ಗಿಕ ರೋಗಗಳು ಮತ್ತು ಅವುಗಳನ್ನು ತಡೆಗಟ್ಟುವ ಕ್ರಮಗಳು

—ಪಿ. ಎಸ್. ಬಣಕಾರ

೨ ಪ್ರಾಚೀನ ಭಾರತದಲ್ಲಿಯ ವಿದ್ಯಾಕೇಂದ್ರಗಳು

—ಅನಂತ ಕುಲಕರ್ಣಿ

೩ ಗ್ರಾಮಗಳಲ್ಲಿ ಆರೋಗ್ಯ

—ಪಿ. ಎಸ್. ಶಂಕರ

೪ ಚಟಗಳು ರೂಢಿಗಳು ಮತ್ತು ಕ್ಯಾನ್ಸರ್

—ಎಸ್. ಜಿ. ನಾಗಲೋಟಿಮಠ

೫ ಸಿಡುಬುರೋಗ

—ಬಿ. ಟಿ. ತುಕೋಳ

೬ ರಂಗಭೂಮಿಯ ನಟಸಾರ್ವಭೌಮ ಸಿದ್ರಾಮಪ್ಪ ಹಂದಿಗನೂರ

—ಬಿ. ಆರ್. ನಾಡಗೌಡ

೭ ಮೋಕ್ಷಗುಂಡಂ ವಿಶ್ವೇಶ್ವರಯ್ಯ

—ಶಿವಕುಮಾರ ಪಾಟೀಲ

೮ ತ್ರಿವೇಣಿಯವರ ಕಾದಂಬರಿಗಳು

—ವಿಜಯಶ್ರೀ ಸಬರದ

೯ ದಾಸಸಾಹಿತ್ಯ ಹಾಗೂ ಸಾಮಾಜಿಕ ಮೌಲ್ಯಗಳು

—ಇಲ್ಲೂರು ಜಯರಾಮಪ್ಪ

೧೦ ಸರ್ವೋದಯ ಹಾಗೂ ಜನಕಲ್ಯಾಣ

—ಎಂ.ಎಸ್.ಬಡಕಲಿ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩